

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 07 Issue : 223 Wednesday 14-05-2025 E-mail : maruti.b.hosamani76@gmail.com Page: 4 Price : Rs. 1/-


## ಮನೆ, ಮನಗಳಲ್ಲಿ ಪ್ರತಿಮೆಗಿಂತ ಶಾಂತಿ, ಅಹಿಂಸೆ ನೆಲೆಸಲಿ

### ಭಗವಾನ್ ಬುದ್ಧ ಜಯಂತಿಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ





**ಸಿಹಿ ಕಹಿ ಸುದ್ದಿ,**

**ಹೊಸಪೇಟೆ :** ಬಹುತೇಕರ ಮನೆಗಳಲ್ಲಿ ಬುದ್ಧನ ಪ್ರತಿಮೆಗಳನ್ನು ಇರಿಸಲಾಗಿದೆ. ಆದರೆ ಅಶಾಂತಿ ಮತ್ತು ಹಿಂಸಾತ್ಮಕ ವಾತಾವರಣಗಳೇ ಹೆಚ್ಚಾಗಿರುವ ಪ್ರಸ್ತುತ ಕಾಲಘಟ್ಟದಲ್ಲಿ ಮನೆ, ಮನಗಳಲ್ಲಿ ಶಾಂತಿ, ಅಹಿಂಸೆ ನೆಲೆಸಬೇಕಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇ-ರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರ ಸಭೆ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಭಗವಾನ್ ಬುದ್ಧ ಜಯಂತಿಯಲ್ಲಿ ಬುದ್ಧನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಸೋಮವಾರ ಮಾತನಾಡಿದರು.

ವಿಶ್ವ ಶಾಂತಿಯನ್ನು ಬಯಸಿದ್ದ ಗೌತಮ ಬುದ್ಧರ ತತ್ವಾದರ್ಶಗಳನ್ನು ಅಳವಡಿಸಿ ಕೊಳ್ಳಬೇಕಾದ ಸಕಾಲಿಕ ಅನಿವಾರ್ಯತೆ ಇದೆ. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಹಿಂಸಾತ್ಮಕ ಶೋಷಣೆಗಳು, ಕೊಲೆ ಸುಲಿಗೆ, ರಕ್ತಪಾತ, ಕ್ರೌರ್ಯದ ಮಾನಸಿಕತೆಯನ್ನು ತೊಲಗಿಸಿ, ಸರ್ವರೂ ಶಾಂತಿಯ ಬೆಳಕಿನಡಿಯಲ್ಲಿ ಬದುಕಲು ಬುದ್ಧನ ಮೌಲ್ಯಯುತ ಸಂದೇಶಗಳನ್ನು ಎಣ್ಣೆಯಂತೆ ಬಳಸಿಕೊಂಡು ಬದುಕು ಬೆಳಗಿಸುವತ್ತ ಸಾಗಬೇಕಿದೆ. ಮನುಷ್ಯ ಬದುಕಿನ ಘನತೆಗೆ ಬುದ್ಧನ ಅಷ್ಟಾಂಗ ಮಾರ್ಗಗಳನ್ನು ಅನುಸರಿಸ ಬೇಕಿದೆ.

ಬುದ್ಧನ ಆಶಯ ದುಖಃ ದಿಂದ ಮನುಷ್ಯನನ್ನು ದೂರ ಮಾಡುವುದಾಗಿದೆ. ಧ್ಯಾನ ದಿಂದ ದುಖಃ ಮತ್ತು ಪಾಪ ಕರ್ಮಗಳು ಮುಕ್ತವಾಗಲು ಸಹಕಾರಿಯಾಗಲಿದೆ ಎಂದರು.

ಇದೇ ವೇಳೆ ವಿಜಯನಗರ ಹಂಪಿ ಬುದ್ಧ ವಿಹಾರ ನಿರ್ಮಾಣ ಟ್ರಸ್ಟ್ ಪದಾಧಿಕಾರಿಗಳು ನಗರದ ಶ್ರೀಗುರು ಪಿಯು ಕಾಲೇಜಿನ ಬಳಿಯಿರುವ ವೃತ್ತವನ್ನು ಸಿದ್ಧಾರ್ಥ ಗೌತಮ ಬುದ್ಧ ವೃತ್ತ ಎಂದು ನಾಮಕರಣ ಗೊಳಿಸಿ, ವೃತ್ತದ ಅಭಿವೃದ್ಧಿಗೆ ಹೈಮಾಸ್ಟ್ ವಿದ್ಯುತ್ ದೀಪದ ವ್ಯವಸ್ಥೆ ಕಲ್ಪಿಸ ಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಜಯಂತಿ ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ, ಸಾಹಿತಿ ಬಿ.ಪೀರ್ ಬಾಷಾರವರು ಭಗವಾನ್ ಬುದ್ಧನ ಕುರಿತು ವಿಶೇಷ ಉಪನ್ಯಾಸನೀಡಿದರು.ಈವೇಳೆಯಲ್ಲಿಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣವರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ, ದಲಿತ ಪರ ಸಮಾಜ ಮುಖಂಡ ಎಂ.ಜಂಬಯ್ಯ ನಾಯ್ಕ್, ಕನ್ನಡ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಚನ್ನಸ್ವಾಮಿ ಸೋಸಲೆ, ರಾಜ್ಯೋತ್ಸವ ಪುರಸ್ಕೃತ ಜೆ.ಎಂ.ವೀರಸಂಗಯ್ಯ, ಹಂಪಿ ವಿಜಯನಗರ ಬುದ್ಧ ವಿಹಾರ ನಿರ್ಮಾಣ ಟ್ರಸ್ಟ್ ಮುಖಂಡರು, ಸೋಮಶೇಖರ್ ಬಣ್ಣದ ಮನೆ, ಸಣ್ಣ ಮಾರಪ್ಪ, ಸೂರ್ಯನಾರಾಯಣ, ಜೆ. ಶಿವಕುಮಾರ್, ನಂಬಗಲ್ ರಾಮಕೃಷ್ಣ, ವಿವಿಧ ಸಮಾಜದ ಮುಖಂಡರು,ಜಿಲ್ಲಾಮಟ್ಟದಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್. ಹೊಸಪೇಟೆ**

## 100 ದಿನ ಮನರೇಗಾ ಕೆಲಸ ಕಲ್ಪಿಸಿ ಎಂದು ಪಿಡಿಓ ಮತ್ತು ಅಧ್ಯಕ್ಷರಿಗೆ ಹಕ್ಕೋತ್ತಾಯ ಪತ್ರ ಕೊಡುವದರೊಂದಿಗೆ – ಪಟ್ಟು ಹಿಡಿದ ಗ್ರಾಮಸ್ಥರು



**ಸಿಹಿ ಕಹಿ ಸುದ್ದಿ,**

**ಜಕ್ಕಲಿ :** ಸರ್ಕಾರದ ನಿಯಮದ ಪ್ರಕಾರ ಪ್ರತಿ ಜಾಬ್ ಕಾರ್ಡಿಗೆ 100 ದಿನ ಕೆಲಸ ಕೊಡಬೇಕೆಂದು ಆದೇಶ ಇದ್ರೂ ಕೂಡ ಕೇವಲ ಕೆಲವೇ ಕೆಲವೂ ದಿನಗಳು ಮಾತ್ರ ಕೆಲಸ ಕೊಡುವ ಪಿಡಿಓ ಮೇ 12 ರಂದು ಸೋಮವಾರ 100 ದಿನ ಕೆಲಸ ಕೊಡಲೇ ಬೇಕು ಎಂದು ಗ್ರಾಮ ಪಂಚಾಯಿತಿ ಪಿಡಿಓ ಮತ್ತು ಅಧ್ಯಕ್ಷಣಿಗೆ ತರಾಟೆಗೆ ತೆಗೆದು-ಕೊಂಡ ಗ್ರಾಮಸ್ಥರು.

ಹೌದು ಇದು ಎಲ್ಲಿಅಂತೀರಾಗದಗ ಜಿಲ್ಲೆ ರೋಣ ತಾಲೂಕು ಜಕ್ಕಲಿ ಗ್ರಾಮದಲ್ಲಿ ಅಭಿವೃದ್ಧಿ ಮರೀಚಿಕೆ, ಜೊತೆಗೆ ಬಡ ಕೂಲಿ ಕಾರ್ಮಿಕರಿಗೆ 100 ದಿನ ಕೆಲಸ ಕೊಡದ ಪಿಡಿಓ ಗೆ ಗ್ರಾಮದ ಪ್ರಜ್ಞಾವಂತ ಯುವಕರು ಮತ್ತು ಮಹಿಳೆಯರು ಸರ್ಕಾರ ನಿಯಮದ ಪ್ರಕಾರ ಪ್ರತಿ ಜಾಬ್ ಕಾರ್ಡಿಗೂ 100 ದಿನ ಕೆಲಸ ಕೊಡಲೇ ಬೇಕು 100 ದಿನ ಕೆಲಸ ಕೊಡದೆ ಇದ್ದಲ್ಲಿ ಗ್ರಾಮ ಪಂಚಾಯಿತಿಯ ಪಿಡಿಓ ಎಸ್. ಎಸ್ ರಿತ್ತಿ ಮತ್ತು ಪಂಚಾಯಿತಿಯ ಅಧ್ಯಕ್ಷೆ ಗಂಗವ್ವ ಜಂಗಣ್ಣವರ ಹಾಗೂ ಸದಸ್ಯರು ಹೊಣೆಗಾರರು ಎಂದು ಗ್ರಾಮದ ಯುವಕರು ಹಕ್ಕೊತ್ತಾಯ ಪತ್ರವನ್ನು ಸಲ್ಲಿಸಿದರು.

ಇದೆ ಸಂದರ್ಭದಲ್ಲಿ ಶಿಕ್ಷಕ ನಿಂಗರಾಜ್ ತುರಾಯದ. ಶರಣಪ್ಪ ಕೋರಿ. ಮಂಜುನಾಥ ತೋಟದ. ಹಣಮಂತ ಮಾದರ. ಅನಿಲಿಕುಮಾರ ತಳವಾರ. ಮಂಜು ವಾಲಿ. ರಾಘವೇಂದ್ರ ನರಿ. ಆನಂದ ಕೊಪ್ಪದ. ಗ್ರಾಮದ ಇನ್ನೂ ಅನೇಕ ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ.ರೋಣ.ಗದಗ**

## ವಿದ್ಯಾ ಪೋಷಕದಿಂದ ಆರ್ಥಿಕ ಸಹಾಯಕ್ಕೆ – ಅರ್ಜಿ ಆಹ್ವಾನ




**ಸಿಹಿ ಕಹಿ ಸುದ್ದಿ,**

**ಗದಗ :** ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಡುಬಡವ ಅರ್ಹಪ್ರತಿಭಾನ್ವಿತವಿದ್ಯಾರ್ಥಿಗಳಿಗೆ ಧಾರವಾಡದ ವಿದ್ಯಾ ಪೋಷಕ ಸಂಸ್ಥೆಯು ನರ್ಚರ್ ಮೆರಿಟ್ ಯೋಜನೆ ಅಡಿಯಲ್ಲಿ 2025–26 ನೇ. ಶೈಕ್ಷಣಿಕ ಸಾಲಿಗಾಗಿ ಆರ್ಥಿಕ ಸಹಾಯವನ್ನು ನೀಡಲು ಮುಂದಾಗಿದೆ.

10 ನೇ. ತರಗತಿ ನಂತರದ ಶಿಕ್ಷಣ ಮುಂದುವರಿಕೆಗಾಗಿ ಆರ್ಥಿಕ ಸಹಾಯ್ಯಕಾಗಿ ಅರ್ಜಿ ಹಾಕಲು ವಿದ್ಯಾರ್ಥಿಗಳು ಪ್ರಥಮ ಬಾರಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಮಾರ್ಚ್ 2025 ರಲ್ಲಿ ಬರೆದಿರ ಬೇಕು. ಮತ್ತು ಮೊದಲನೇ ಪ್ರಯತ್ನದಲ್ಲಿ ಶೇ. 80% ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ/ನಿಯರು ಈ ಅರ್ಜಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ. ಪಿ.ಯು.ಸಿ. ಮೊದಲನೇ ವರ್ಷದ ವಾಣಿಜ್ಯ ಮತ್ತು ಡಿಪ್ಲೋಮಾ ಕೋರ್ಸ್ ಗೆ ಸೇರಲು ಬಯಸುವ ವಿದ್ಯಾರ್ಥಿ/ನಿಯರು ಈ ಅರ್ಜಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ. ಕುಟುಂಬದ ವಾರ್ಷಿಕ ವರಮಾನ ರೂ. 1,20,000/– ಕ್ಕಿಂತ ಕಡಿಮೆ ಇರಬೇಕು. ವಿದ್ಯಾರ್ಥಿಯ ಪಾಲಕರು/ಪೋಷಕರು ಧಾರವಾಡ, ಗದಗ, ಹಾವೇರಿ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ವಿಜಯಪುರ, ಬಾಗಲಕೋಟೆ, ದಾವಣಗೆರೆ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ವಾಸವಿದ್ದವ ರಾಗಿರಬೇಕು. ವಿದ್ಯಾ ಪೋಷಕ ನರ್ಚರ್ ಮೆರಿಟ್ ಕಾರ್ಯಕ್ರಮವು ಸ್ವ-ಯಂ ಸೇವಕರ ಲಭ್ಯತೆಯ ಮೇಲೆ ಅವಲಂಬಿತ ವಾಗಿರುತ್ತದೆ. ಕಾರಣ ಹೊಸ ಅರ್ಜಿಯನ್ನು 2025–26 ಪರಿಗಣಿಸುವುದು ಕೆಲವೊಂದು (ಸ್ವಯಂ ಸೇವಕರು ಲಭ್ಯವಿರುವ) ಜಿಲ್ಲಾ ಅಥವಾ ತಾಲೂಕುಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಧನ ಸಹಾಯದ ಅರ್ಜಿಯು ವಿದ್ಯಾಪೋಷಕ ಸಂಸ್ಥೆಯ ಅಂತರ್ಜಾಲ ತಿತಿತಿ.ತುಜಥಿಚಿ-ಠಿಥುಚಿಞ.ಟಿರಂ ಲಭ್ಯವಿದೆ. ವಿದ್ಯಾರ್ಥಿಗಳು ಅರ್ಜಿಯನ್ನು ಆನ್ಲೈನ್ ಮೂಲಕ ಅದರಲ್ಲಿ ನಮೂದಿಸಿರುವ ಮಾಹಿತಿಯನ್ನು ತುಂಬಿ ಅಗತ್ಯ ದಾಖಲಾತಿಗಳನ್ನು ಅಪ್ಲೋಡ್ ಮಾಡಬೇಕು. ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜೂನ್ 10, 2025. ಹೆಚ್ಚಿನ ಮಾಹಿತಿಗಾಗಿ ವಿದ್ಯಾ ಪೋಷಕ, ನಂ. 307/4 ಎ1, ನಗರಕರ ಕಾಲೋನಿ, ಮಹಿಷಿ ರಸ್ತೆ, ಮಾಳಮಡ್ಡಿ ಧಾರವಾಡ, ದೂರವಾಣಿ ಸಂ–ಖ್ಯೆ : 0836–2747357 ನ್ನು ಸಂಪರ್ಕಿಸಬಹುದು.

ಗದಗ ಜಿಲ್ಲೆಯ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಡಾ.ಸಂಗಮೇಶ ಸಜ್ಜನರ ಮೊ– 9945555084, ಡಾ, ಪ್ರಭು ಗಂಜಿಹಾಳ ಮೊ 9448775346 ಡಾ, ಪಿ.ಎಸ್ ಕಣವಿ ಮೊ: 9449121688, ಪ್ರೊ.ಎಚ್. ಎನ್ ಕಾಳೆ ಮೊ: 9108992921 ಇವರನ್ನು ಸಂಪರ್ಕಿಸ ಬಹುದಾಗಿದೆ.

**ಡಾ.ಪ್ರಭು ಗಂಜಿಹಾಳ**
**ಮೊ:9448775346**

## ಅವೈಜ್ಞಾನಿಕ ಚರಂಡಿ ವಿದ್ಯಾನಗರ ನಿವಾಸಿಗಳ ಗೋಳು

**ಮಹಾಲಿಂಗಪುರ :** ಪಟ್ಟಣದ ಆರನೇ ವಾರ್ಡಿನ ವಿದ್ಯಾನಗರ ಬಡಾವಣೆಯಲ್ಲಿನ ಎಂಟನೇ ಕ್ರಾಸ್ ನಲ್ಲಿ ಅವೈಜ್ಞಾನಿಕ ಚರಂಡಿ ನಿರ್ಮಾಣದಿಂದಾಗಿ ಚರಂಡಿ ನೀರು ಸರಾಗವಾಗಿ ಹರಿದು ಹೋಗದೇ ಅಲ್ಲಿನ ನಿವಾಸಿಗಳು ನಿತ್ಯ ಗೋಳಾಡುವಂತಾಗಿದೆ.

ಸಾಯಿನಾಥ ಉಪ್ಪಾರ, ವಿನಯ ಹೆಗ್ಗಳಗಿ, ಕಿಶೋರ ಹಂಚಾಟೆ, ದೀರು ಕುಲಕರ್ಣಿ ಸೇರಿದಂತೆ ಅಲ್ಲಿನ ನಿವಾಸಿಗಳು ಗುತ್ತಿಗೆದಾರ ಭಗವಂತ ಬಂಡಿವಡ್ಡರ ಅವರು ಚರಂಡಿ ನಿರ್ಮಾಣದ

ವೇಳೆಯೇ ಅವೈಜ್ಞಾನಿಕ ಚರಂಡಿ ನಿರ್ಮಿಸಿದ್ದರಿಂದ ನೀರು ಹರಿಯದೇ ಕೊಳಚೆ ನೀರು ನಿಂತು ಗಬ್ಬೆದ್ದು ನಾರುತ್ತಿದೆ. ಈ ಕುರಿತು ಹಲವು ಬಾರಿ ಪುರಸಭೆ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಪ್ರಯೋಜನವಾಗಿಲ್ಲ ಎಂದು ಪುರಸಭೆ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಪತ್ರಿಕೆಯೊಂದಿಗೆ ಮಾತನಾಡಿ ಪುರಸಭೆಯ ಅಭಿಯಂತರರು ಮತ್ತು ಗುತ್ತಿಗೆದಾರರನ್ನು ಸ್ಥಳಕ್ಕೆ ಕಳಿಸಿ, ಅವೈಜ್ಞಾನಿಕ ಚರಂಡಿಯಿಂದ ವಿದ್ಯಾನಗರ



ನಿವಾಸಿಗಳಿಗಾಗುತ್ತಿರುವ ಸಮಸ್ಯೆಯನ್ನು ಶೀಘ್ರ ಬಗೆ ಹರಿಸಲು ಪ್ರಯತ್ನಿಸಲಾಗುವದು ಎಂದು ತಿಳಿಸಿದ್ದಾರೆ.

## ಜಮಖಂಡಿಯಲ್ಲಿ "ಅಕ್ಕ ಕೆಫೆ" ಉದ್ಘಾಟನೆ



**ಜಮಖಂಡಿ :** ಮಹಿಳಾ ಸ್ವ- ಸಹಾಯ ಸಂಘಗಳಿಗೆ ಉತ್ತೇಜನ ಹಾಗೂ ಗ್ರಾಮೀಣ ಬಡ ಮಹಿಳೆಯರ ಆರ್ಥಿಕ ಸಬಲೀಕರಣ ಮಾಡಲು ಸರ್ಕಾರದ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದು ಅದಕ್ಕಾಗಿ ನಗರ ಪ್ರದೇಶದಲ್ಲಿ ಸ್ವ-ಸಹಾಯ ಸಂಘಗಳ ಮಹಿಳೆಯರು ನಡೆಸುವ "ಅಕ್ಕ ಕೆಫೆ" ಹಾಗು ಸೂಪರ ಮಾರ್ಕೆಟನ್ನು ಅಬಕಾರಿ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರಾದ ಆರ್. ಬಿ. ತಿಮ್ಮಾಪುರು ಉದ್ಘಾಟಿಸಿಸಿದರು. ಅವರು ಗ್ರಾಮೀಣ ಪ್ರದೇಶದಲ್ಲಿ ಸ್ಥಳೀಯ ಆಹಾರವನ್ನು ಶುಚಿ-ರುಚಿಯಾಗಿ ಗುಣಮಟ್ಟದ ಆಹಾರ ತಯಾರಿಸಿ ಕೈಗೆಟುಗುವ ದರದಲ್ಲಿ ಮಹಿಳೆಯರೇ ನಡೆಸುವ"ಅಕ್ಕ ಕೆಫೆ" ಇದಾಗಿದೆ. ರಾಜ್ಯಾದ್ಯಂತ ಒಂದೇ ಮಾದರಿಯ "ಅಕ್ಕ ಕೆಫೆ"ಯನ್ನು ನಾಮಕರಣ ಹಾಗೂ ಬ್ರ್ಯಾಂಡಿನೊಂದಿಗೆ ಸಂಜೀವಿನಿ ಸ್ವ-ಸಹಾಯ ಗುಂಪಿನ ಮಹಿಳೆಯರು ನಡೆಸುವ ಉದ್ಯೋಗವಾಗಿದೆ ಎಂದರು. ಗ್ರಾಮೀಣ ಪ್ರದೇಶದಲ್ಲಿನ ಬಡತನದ ಪ್ರಮಾಣವನ್ನು ಕಡಿಮೆ ಮಾಡುವುದು,ಗ್ರಾಮೀಣ ಬಡ ಮಹಿಳೆಯರ ಆರ್ಥಿಕ ಸಬಲೀಕರಣ ಮಾಡುವುದು, ಉತ್ತಮ ಗುಣಮಟ್ಟದ ಶುಚಿ-ರುಚಿಯಾದ ಪೌಷ್ಟಿಕ ಆಹಾರವನ್ನು ಒದಗಿಸುವುದು, ಮಹಿಳೆಯರಿಗೆ ಗುಣಮಟ್ಟದ ಆಹಾರ ಸಾಮರ್ಥ್ಯ ಅಭಿವೃದ್ಧಿ ತರಬೇತಿ ನೀಡುವುದು, "ಅಕ್ಕಕೆಫೆ"ಯಉದ್ದೇಶವಾಗಿದೆ.ಸ್ವಸಹಾಯ ಸಂಘದ ಸದಶ್ಯರು ತಯಾರಿಸುವ ವಿವಿಧ ವಸ್ತುಗಳಿಗೆ ಮಾರ್ಕೆಟಿಂಗ್ ವ್ಯವಸ್ಥೆ ಕಲ್ಪಿಸುವ ಉದ್ದೇಶವಾಗಿದೆ ಎಂದು ತಿಳಿಸಿ ನಗರದ ಬಿ. ಎಲ್. ಡಿ. ಇ. ಕಾಲೇಜ ಕ್ರಿಂಡಾಂಗಣ ಎದುರುಗಡೆ ತಾಲೂಕು

ಪಂಚಾಯತ ಮಳಿಗೆಯಲ್ಲಿ ಸ್ಥಾಪಿಸಲಾದ "ಅಕ್ಕಕೆಫೆ" ಹಾಗು ಸೂಪರ ಮಾರ್ಕೆಟನ್ನು ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಮುಖ್ಯ ಅತಿಥಿಗಳಾದ ಶಾಸಕ ಜಗದೀಶ ಗುಡಗುಂಟಿ ಅವರು ಮಾತನಾಡಿ, ಸಂಜೀವಿನಿ- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಅಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಕೌಶಲ್ಯ ತರಬೇತಿ ನೀಡಿ ಸದಸ್ಯರು ಉತ್ಪಾದಿಸುವ ಕರಕುಶಲ ಗುಣಮಟ್ಟದ ವಸ್ತುಗಳಿಗೆ ಹೆಚ್ಚಿನ ಪ್ರಮಾಣದಲ್ಲಿಸ್ಥಳೀಯ ಮಾರುಕಟ್ಟೆಹಾಗೂ ಆನ್ ಲೈನ್ ಮಾರ್ಕೆಟಿಂಗ ಸದುಪಯೋಗ ಮಾಡಿಕೊಂಡು ಸ್ವಸಹಾಯ ಸಂಘದ ಸದಸ್ಯರು ಆರ್ಥಿಕವಾಗಿ ಅಭಿವೃದ್ಧಿಯಾಗ ಬೇಕೆಂದು ತಿಳಿಸಿದರು.

ಜೀವನೋಪಾಯ ಯೋಜನೆಗಳನ್ನು ಅನುಷ್ಠಾನಮಾಡಿ ಸ್ವಯಂ ಉದ್ಯೋಗಗಳಿಗೆ ಉತ್ತೇಜಿಸಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಅದರಲ್ಲಿ "ಅಕ್ಕಕೆಫೆ"ಹಾಗೂ ಸೂಪರ್ ಮಾರ್ಕೆಟ ಸಹ ಒಂದು. ಮಹಿಳೆಯರು ಉತ್ಪಾದಿಸುವ ವಸ್ತುಗಳನ್ನು ಮಾರಾಟ ಮಾಡಲು ನಗರದಲ್ಲಿ ಸೂಪರ್ ಮಾರ್ಕೆಟ್ ತೆರೆಯಲಾಗಿದೆ ಎಂದು ತಿಳಿಸಿ ಈಗಾಗಲೇ ಜಿಲ್ಲೆಯಲ್ಲಿಪ್ರತಿಗ್ರಾಮಪಂಚಾಯಿತಿಗೊಂದು ಮಹಿಳಾ ಸ್ವ-ಸಹಾಯ ಸಂಘಗಳ ವತಿಯಿಂದ ಸಹೋದರಿ ಕ್ಯಾಂಟಿನ್ ತೆರೆಯಲಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸಿಇಓ ಶಶಿಧರ ಕುರೇರ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಡಾ. ಪುನಿತ್ ಬಿ.ಆರ್. , ಕಂದಾಯ ಉಪ ವಿಭಾಗಾಧಿಕಾರಿ ಶ್ರೀಮತಿ ಶ್ವೇತಾ ಬಿಡಿಕರ್, ಪಂಚಾಯತ ಸಹಾಯಕ ಯೋಜನಾ ಅಧಿಕಾರಿ ಭೀಮಪ್ಪ ತಳವಾರ, ಕಾರ್ಯನಿರ್ವಾಹಕ ಅಧಿಕಾರಿ ಸಂಜೀವ ಜುನ್ನೂರ,ತಾಲೂಕು ಪಂಚಾಯತ ಜಮಖಂಡಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ ರಬಕವಿ-ಬನಹಟ್ಟಿಯ ಸಿದ್ದಪ್ಪ ಪಟ್ಟಿಹಾಳ , ತಾಲೂಕು ಪಂಚಾಯತ ಸಹಾಯಕ ನಿರ್ದೇಶಕ (ನರೇಗಾ) ಸಂಜು ಹಿಪ್ಪರಗಿ ಸಂಜೀವಿನಿ ಯೋಜನೆಯ ತಾಲೂಕಿನ ಎಲ್ಲಾ ಸಿಬ್ಬಂದಿಗಳು,

ತಾಲೂಕು ಪಂಚಾಯತ ಸಿಬ್ಬಂದಿಗಳು ಹಾಗೂ ತಾಲೂಕಿನ ಸಂಜೀವಿನಿ ಮಹಿಳಾ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟಗಳ ಅಧ್ಯಕ್ಷರು, ಎಂಬಿಕೆ, ಎಲ್. ಸಿ.ಆರ್.ಪಿ. ಗಳು, ಕೃಷಿ ಮತ್ತು ಪಶು ಸಖಿಗಳು ಮತ್ತು ಸ್ವ-ಸಹಾಯ ಸಂಘಗಳ ಮಹಿಳೆಯರು ಭಾಗವಹಿಸಿದ್ದರು.

## ಜಾಡಗೌಡ ಕಾರ್ಯಾಧ್ಯಕ್ಷ, ಸೋರಗಾಂವಿ ಕಾರ್ಯದರ್ಶಿ



**ಬನಹಟ್ಟಿ :** ಇಲ್ಲಿನ ಪ್ರತಿಷ್ಠಿತ ಜನತಾ ಶಿಕ್ಷಣ ಸಂಘದ ನೂತನ ಕಾರ್ಯಧ್ಯಕ್ಷರಾಗಿ ಬಸವಂತ ಜಾಡಗೌಡ ಮತ್ತು ಗೌರವ ಕಾರ್ಯದರ್ಶಿಯಾಗಿ ರಾಜಶೇಖರ ಸೋರಗಾಂವಿ ಅವಿರೋಧವಾಗಿ ಆಯ್ಕೆಗೊಂಡರು.

ಬುಧವಾರ ಬನಹಟ್ಟಿಯ ಸಂಘದ ಕಾರ್ಯಾಲಯದಲ್ಲಿ ಜರುಗಿದ ಆಡಳಿತ ಮಂಡಳಿಯ ನೂತನ ಸಭೆಯಲ್ಲಿ ಇಬ್ಬರನ್ನೂ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸುಭಾಷಚಂದ್ರ ಭದ್ರನವರ ಅಧ್ಯಕ್ಷ, ಬಸವರಾಜ ಭದ್ರನವರ ಉಪಾಧ್ಯಕ್ಷ, ಆಡಳಿತ ಮಂಡಳಿಯ ಸದಸ್ಯರಾಗಿ ಪಂಡಿತ ಹನಗಂಡಿ, ಎಂ. ಜಿ. ಕೆರೂರ, ಶ್ರೀಶೈಲ ಯಾದವಾಡ, ಮಹಾದೇವಿ ಕೊಳಕಿ, ಮಲ್ಲಿಕಾರ್ಜುನ ಬಾಣಕಾರ, ಭೀಮಪ್ಪ ಮಗದುಮ್, ಗಂಗಾಧರ ಕೊಕಟನೂರ, ಡಾ. ಪಂಡಿತ ಪಟ್ಟಣ, ವೀರಭದ್ರ ಕುಳ್ಳಿ ಆಯ್ಕೆಯಾಗಿದ್ದರು.

ಪಾರದರ್ಶಕ ಆಡಳಿತ: ಸಂಘದ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾದ ಬಸವಂತ ಜಾಡಗೌಡ ಮಾತನಾಡಿ, ಮುಂದಿನ ದಿನಗಳಲ್ಲಿ ಸಂಘವನ್ನು ಇನ್ನಷ್ಟು ಅಭಿವೃದ್ಧಿ ಪಡಿಸುವಲ್ಲಿ ಆಡಳಿತ ಮಂಡಳಿಯ ಸದಸ್ಯರ ಸಹಕಾರ ಮುಖ್ಯವಾಗಿದೆ. ಪಾರದರ್ಶಕ ಆಡಳಿತ ನಮ್ಮೆಲ್ಲರ ಗುರಿಯಾಗಿದೆ ಎಂದರು.

ಗೌರವ ಕಾರ್ಯದರ್ಶಿ ರಾಜಶೇಖರ ಸೋರಗಾಂವಿ ಮಾತನಾಡಿ, ಜನತಾ ಶಿಕ್ಷಣ ಸಂಘವು ಉತ್ತರ ಕರ್ನಾಟಕದಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿದೆ. ಒಂದನೆಯ ತರಗತಿಯಿಂದ ಎಂ.ಕಾಂ, ಎಮ್. ಎ. ಇಂಗ್ಲಿಷ್ ಸ್ನಾತಕೋತ್ತರ ಕೇಂದ್ರ, ಸಂಶೋಧನಾ ಕೇಂದ್ರ, ಹಾಗೂ ಶಿಕ್ಷಣ ಮಹಾವಿದ್ಯಾಲಯದ ಕಾರ್ಯ ಮಾಡುತ್ತಿವೆ.

ಸುತ್ತಮುತ್ತಲಿನ ನಗರ ಮತ್ತು ಗ್ರಾಮೀಣ ಪ್ರದೇಶದ ಅಂದಾಜು ನಾಲ್ಕು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ಕೋರ್ಸುಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ-ಕಲಾವಿದರ ನಡುವಿನ ಸಂಪರ್ಕ ಕಡಿದಿದೆ : ಸಂತೋಷ ಗದ್ದನಕೇರಿ ಆರೋಪ




**ಬಾಗಲಕೋಟೆ :** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸ್ಥಳೀಯ ಕಲಾವಿದರ ಜತೆ ಯಾವುದೇ ಪ್ರಾಮಾಣಿಕ ಸಂಬಂಧವಿಲ್ಲದಂತೆ ನಡೆದುಕೊಳ್ಳುತ್ತಿದೆ ಎಂದು ಸಂಗೀತ ಕಲಾವಿದ ಸಂತೋಷ ಗದ್ದನಕೇರಿ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, "ಸ್ಥಳೀಯ ಕಲಾವಿದರನ್ನು ಗುರುತಿಸಿ, ಅವರ ಪ್ರತಿಭೆಗೆ ಅನುವು ಕಲ್ಪಿಸಿ, ಪೋಷಿಸಲು ಇಲಾಖೆ ವಿಫಲವಾಗಿದೆ.

ಇಂದಿನ ಪರಿಸ್ಥಿತಿಯಲ್ಲಿ ನಮ್ಮಂತವರಿಗೆ ಯಾವುದೇ ಮಾನ್ಯತೆ ಇಲ್ಲ, ಯಾವುದೇ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಅವಕಾಶವಿಲ್ಲ. ಅನುದಾನ ಹಾಗೂ ಸಹಕಾರವೇ ಇಲ್ಲ, ಎಂದರು.

ಕಲಾವಿದರಿಗೆ ಪ್ರೋತ್ಸಾಹ ನೀಡುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಇಲಾಖೆಯ ಸಹಾಯಕ ನಿರ್ದೇಶಕರ ನಿರ್ಲಕ್ಷ್ಯಪೂರ್ಣ ನಡೆ ಖಂಡನೀಯ ಎಂದು ಗದ್ದನಕೇರಿ ಕಿಡಿಕಾರಿದರು. ಕಲಾಕ್ಷೇತ್ರದಲ್ಲಿ ಸ್ಥಳೀಯ ಪ್ರತಿಭೆಗಳ ಬೆಳವಣಿಗೆಗಾಗಿ ಇಲಾಖೆ ತಕ್ಷಣ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ರಾಮ್ಮಣ್ಣ ವಾಲಿಕಾರ, ಕಾರ್ಯದರ್ಶಿ ಸಿದ್ದು ಉಪ್ಪಲದಿನ್ನಿ, ಉಪಾಧ್ಯಕ್ಷ ಕೃಷ್ಣಾ ರಂಗಣ್ಣವರ, ಹಾಗೂ ಸದಸ್ಯರುಗಳಾದ ಚಿದಾನಂದಸಾ ಕಾಟವಾ (ಗುಳೇದಗುಡ್ಡ), ಚಂದ್ರಕಾಂತ ಆಲೂರ ಮತ್ತು ಚಂದ್ರು ಚಲವಾದಿ ಇದ್ದರು.

## ಯುವಕರಲ್ಲಿ ಸೇವಾ ಮನೋಭಾವ ಮೂಡಿಸುವುದೇ ಎನ್‌ಎಸ್‌ಎಸ್‌ನ ಧ್ಯೇಯ

**ಮೂಡಲಗಿ :** ಯುವಕರಲ್ಲಿ ಶಿಸ್ತು, ಸಮಯ ಪ್ರಜ್ಞೆ, ನಾಯಕತ್ವದ ಗುಣ, ದೇಶಾಭಿಮಾನ ಮತ್ತು ಸೇವಾ ಮನೋಭಾವ ಮೂಡಿಸುವುದೇ ಎನ್.ಎಸ್.ಎಸ್. ನ ಮುಖ್ಯ ಧ್ಯೇಯವಾಗಿದೆ ಎಂದು ಗೋಕಾಕದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಸಂತೋಷ ಬಿ. ಎಸ್. ಹೇಳಿದರು.

ಮೂಡಲಗಿಯ ಶ್ರೀಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಘಟಕ ತಾಲೂಕಿನ ಗುರ್ಲಾಪುರ ಗ್ರಾಮದಲ್ಲಿ ಹಮ್ಮಿಕೊಂಡ ವಾರ್ಷಿಕ ವಿಶೇಷ ಶಿಬಿರದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಹಳ್ಳಿಯ ಜನರಿಗೆ ಸರ್ಕಾರದ ಸೌಲಭ್ಯಗಳ ಸಂಪೂರ್ಣ ಮಾಹಿತಿ ನೀಡಿ, ಸ್ವಚ್ಛತೆಯ ಕಡೆಗೆ ಗಮನ ಹರಿಸಿ, ಪರಿಸರ ಸಂರಕ್ಷಣೆಯ ಧ್ಯೇಯದೊಂದಿಗೆ ನಡೆಯುತ್ತಿರುವ ಎನ್.ಎಸ್.ಎಸ್ ಶಿಬಿರದಿಂದ ಗ್ರಾಮದ ಚಿತ್ರಣ ಬದಲಾಗಲಿ.

ಈ ನಿಟ್ಟಿನಲ್ಲಿ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಯೇ ನಮ್ಮ ಶಿಬಿರದ ಗುರಿಯಾಗಿರಲಿ. ಎಸ್.ಎಸ್. ಎಸ್. ಶಿಬಿರವು ಸೇವೆಯ ಅನುಭವದ ಜೊತೆಗೆ ನಾಯಕತ್ವದ ಗುಣಗಳನ್ನು ಕಲಿಸಿಕೊಡುತ್ತದೆ. ಆದ್ದರಿಂದ ಶಿಬಿರಾರ್ಥಿಗಳು ಇದರ ಸಂಪೂರ್ಣ ಪ್ರಯೋಜನ ಪಡೆದು ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು, ಸಮಾಜಕ್ಕೆ ಉತ್ತಮ ನಾಯಕರಾಗಿ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಮಹೇಶ ವಾಯ್. ಕಂಬಾರ ಮಾತನಾಡಿ, "ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ಗುರ್ಲಾಪುರ ಗ್ರಾಮದ ಗುರುಹಿರಿಯರ ಸಹಕಾರದಿಂದ ಶಿಬಿರವು ಯಶಸ್ವಿಯಾಗಲಿ"ಎಂದು ಹಾರೈಸಿದರು.

ಮೇ 9 ವರೆಗೆ ನಡೆಯುವ ಏಳು ದಿನಗಳ ಶಿಬಿರವನ್ನು ಸಸಿಗೆ ನೀರು ಹನಿಸುವ ಮೂಲಕ ಮೂಡಲಗಿ ಪುರಸಭೆಯ ಅಧ್ಯಕ್ಷ ಖುಸಾ9ದ ಅನ್ವರ್ ನದಾಫ್, ಸದಸ್ಯ ಆನಂದ ಟಪಾಲ್ದಾರ, ಮತ್ತು ಯಲ್ಲವ್ವ ಪರಪ್ಪ ಹಳ್ಳೂರ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಬಿ. ಸಿ. ಮುಗಳಖೋಡ, ಎಸ್. ಜಿ. ಹಂಚಿನಾಳ, ರುದ್ರಯ್ಯ ಹಿರೇಮಠ, ಈರಯ್ಯ ಹಿರೇಮಠ, ಮಹಾಲಿಂಗ ಮುಗಳಖೋಡ, ಅನ್ವರ್ ನದಾಫ್, ಈಶ್ವರ ಮುಗಳಖೋಡ, ಎ. ಡಿ. ಗಾಣಿಗೇರ, ಸಿದ್ದು ಗಡ್ಡೆಕರ, ಹಾಗೂ ಮಹಾವಿದ್ಯಾಲಯದ ಉಪನ್ಯಾಸಕರು ಭಾಗವಹಿಸಿದ್ದರು.


ಶಿಬಿರಾರ್ಥಿಗಳಾದ ಸುಷ್ಮಾ ಪೂಜೇರಿ ಸ್ವಾಗತಿಸಿದರು. ಸಿದ್ರಾಮ ಪೂಜೇರಿ ವಂದಿಸಿದರು. ಸುಷ್ಮಿತಾ ಟಗರೆ ನಿರೂಪಿಸಿದರು.

## ಮಹಾಲಿಂಗಪುರ ಹಿಂದೂ ಕಾರ್ಯಕರ್ತರ ಮಾನವೀಯ ಕೆಲಸ

**ಮಹಾಲಿಂಗಪುರ :** ಇತ್ತೀಚೆಗೆ ಮಂಗಳೂರಿನಲ್ಲಿ ಮತಾಂಧರಿಂದ ಬರ್ಬರವಾಗಿ ಹತ್ಯೆಗೀಡಾದ ಭಜರಂಗದಳ ಮುಖಂಡ ಸುಹಾಸ್ ಶೆಟ್ಟಿ ಮನೆಗೆ ಬುಧವಾರ ಮಹಾಲಿಂಗಪುರದ ಹಿಂದೂ ಸಂಘಟನೆಯ ಕಾರ್ಯಕರ್ತರು ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಧನ ಸಹಾಯ ನೀಡಿ ಮಾನವೀಯತೆ ಮೆರೆದಿದ್ದಾರೆ.

ಹಿಂದೂ ಸಂಘಟನೆಗಳ ಮುಖಂಡ, ಪುರಸಭೆ ಸದಸ್ಯ ರವಿ ಜವಳಗಿ ಮಾತನಾಡಿ ಹಿಂದುತ್ವಕ್ಕಾಗಿ ಧರ್ಮ ರಕ್ಷಣೆಗಾಗಿ ತನ್ನ ಯೌವ್ವನವನ್ನು ಜೈಲಿನಲ್ಲಿ ಕಳೆದು ತನಗಾಗಿ ಏನೂ ಮಾಡದೆ ತನ್ನ ಜೀವನವನ್ನೇ ಹಿಂದೂ ಸಮಾಜಕ್ಕೆ
ಅರ್ಪಿಸಿದ ಪುಣ್ಯಾತ್ಮನ ತಾಯಿಗೆ ಮಕ್ಕಳಾಗಿ ನಿಂತು ನಿಮ್ಮೊಂದಿಗೆ ನಾವಿದ್ದೇವೆ ಎಂದು ನಮ್ಮ ಕೈಲಾದಷ್ಟು ಧನ ಸಹಾಯ ನೀಡಿದ್ದೇವೆ ಎಂದರು.

ಎನ್‌ಆಯ್‌ಎಗೆ ವಹಿಸಲು ಒತ್ತಾಯ :



ಸುಹಾಸ್ ಹತ್ಯೆ ಒಂದು ಪ್ರತಿಕಾರದ ಹತ್ಯೆಯಾಗಿದೆ. ಇದು ಕೇವಲ 7-8 ಜನರಿಂದ ನಡೆದ ಕೃತ್ಯವಲ್ಲ. ಈ ಹತ್ಯೆಯ ಹಿಂದೆ ಬಹಳ ದೊಡ್ಡ ದೊಡ್ಡ ಕುಳಗಳ ಕೈವಾಡವಿರುವ ಕಾರಣ ಸದರಿ ಪ್ರಕರಣವನ್ನು ಎನ್.ಆಯ್.ಎ.ಗೆ ಹಸ್ತಾಂತರಿಸಬೇಕು. ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಶಿಕ್ಷೆ ಒದಗಿಸಬೇಕೆಂದು ಮಹಾಲಿಂಗಪುರ ಹಿಂದೂ ಸಂಘಟನೆಗಳ ಕಾರ್ಯಕರ್ತರು ಒತ್ತಾಯಿಸಿದರು.

ಪುರಸಭೆ ಸದಸ್ಯ ರವಿ ಜವಳಗಿ, ಹಿಂದೂ ಸಂಘಟನೆಗಳ ಕಾರ್ಯಕರ್ತರಾದ ಪ್ರಕಾಶ ಮರೆಗುದ್ದಿ, ರಾಘು ಗರಗಟ್ಟಿ, ಆನಂದ ಶಿರಗುಪ್ಪಿ, ಸಚಿನ ಕಲ್ಮಡಿ, ಅರ್ಜುನ ಪವಾರ, ಅಭಿ ಲಮಾಣಿ, ಮಂಜುನಾಥ ಭಾವಿಕಟ್ಟಿ, ಶಿವು ಸಣ್ಣಕ್ಕಿ, ಹಣಮಂತ ನಾವಿ, ರಾಘು ಪವಾರ ಸೇರಿದಂತೆ ಇನ್ನೂ ಹಲವರು ಪಾಲ್ಗೊಂಡಿದ್ದರು.

## ದುಶ್ಚಟಗಳ ಭಿಕ್ಷೆ ಬೇಡಿದ ಆನಂದ ದೇವರು ಶ್ರೀಗಳು

**ಜಮಖಂಡಿ :** ತಾಲ್ಲೂಕಿನ ಕಡಕೋಳ ಗ್ರಾಮದ ಬಸವೇಶ್ವರ ಜಾತ್ರಾಮಹೋತ್ಸವದ ಭಾಗವಾಗಿ ಜಮಖಂಡಿ ಓಲೇಮಠದ ಆನಂದ ದೇವರು ಶ್ರೀಗಳು ಗ್ರಾಮದಲ್ಲಿ ಬುಧವಾರ ಜೋಳಿಗೆ ಹಿಡಿದು ಪಾದಯಾತ್ರೆ ನಡೆಸಿ ಗ್ರಾಮಸ್ಥರಿಂದ ದುಶ್ಚಟಗಳ ಭಿಕ್ಷೆ ಬೇಡಿದರು.

ದುಶ್ಚಟಕ್ಕೆ ಅಂಟಿಕೊಂಡಿರುವ ಗ್ರಾಮಸ್ಥರನ್ನು ದುಶ್ಚಟಗಳಿಂದ ಬಿಡಿಸುವ ಸಂಕಲ್ಪದೊಂದಿಗೆ ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ ಹಾಗೂ ರುದ್ರಾಕ್ಷಿ ಧಾರಣ ಕಾರ್ಯಕ್ರಮದ ಮೂಲಕ ಶ್ರೀಗಳು ಗ್ರಾಮದಲ್ಲಿ ಬೆಳಿಗ್ಗೆ ಜೋಳಿಗೆ ಹಿಡಿದು ಪಾದಯಾತ್ರೆ ಕೈಗೊಂಡಿದ್ದರು.

ಬಾಳಿ ಬದುಕಿ ತಮ್ಮ ತಂದೆ-ತಾಯಿಗಳಿಗೆಆಸರೆಯಾಗಬೇಕಾದ ಯುವಕರು ದುಶ್ಚಟಗಳ ದಾಸರಾಗಿ ಜೀವನವನ್ನು ಹಾಳು ಮಾಡಿ ಕೊಳ್ಳುವುದನ್ನು ತಪ್ಪಿಸುವ ಉದ್ದೇಶದಿಂದ ಯುವಕರಲ್ಲಿ ಜಾಗೃತಿಮೂಡಿಸಲುಪಾದಯಾತ್ರೆ ನಡೆಸಿದರು.



ಮಜಾ ಮಾಡುವ ನೆಪದಲ್ಲಿ ಮೋಜು-ಮಸ್ತಿ ಮಾಡಿ ಕೊನೆಗೆ ದುಶ್ಚಟಗಳ ದಾಸರಾಗಿ ಆರೋಗ್ಯ ಹದಗೆಡಿಸಿಕೊಂಡು ಶಿಕ್ಷೆ ಅನುಭವಿಸುವ ಸಂದರ್ಭ ತಂದುಕೊಳ್ಳಬಾರದು. ಆರೋಗ್ಯವೇ ಭಾಗ್ಯ. ಆರೋಗ್ಯವಿಲ್ಲದಿದ್ದರೆ ಸಾಧನೆ ಸಾಧ್ಯವಿಲ್ಲ ಎಂದು ಯುವಕರಲ್ಲಿ ಜಾಗೃತಿ ಮೂಡಿಸಿದರು.

ಕೇವಲ ಬೀಡಿ, ಸಿಗರೇಟ್ ಸೇದುವುದು, ಗುಟ್ಕಾ, ತಂಬಾಕು ತಿನ್ನುವುದು ಹಾಗೂ ಸಾರಾಯಿ ಸೇವಿಸುವುದು ಮಾತ್ರ ದುಶ್ಚಟವಲ್ಲ. ಬದಲಾಗಿ ಸುಳ್ಳು ಹೇಳುವುದು, ಮೋಸ, ವಂಚನೆ ಮಾಡುವುದು, ಇನ್ನೊಬ್ಬರಿಗೆ ನೋವು ಕೊಡುವುದು ಮತ್ತು ತೊಂದರೆ ಮಾಡುವುದು ಕೂಡ ದುಶ್ಚಟವೇ ಆಗಿದೆ ಎಂದು ತಿಳಿಸಿ ಹೇಳಿದರು.

ಸುಮಾರು ನಾಲ್ವತ್ತು ಜನ ಗ್ರಾಮಸ್ಥರು ತಮ್ಮ ದುಶ್ಚಟಗಳಿಗೆ ಬಳಸುವ ವಸ್ತುಗಳನ್ನು ಶ್ರೀಗಳ ಜೋಳಿಗೆಗೆ ಹಾಕಿ ದುಶ್ಚಟಗಳನ್ನು ತ್ಯಜಿಸುವುದಾಗಿ ಶ್ರೀಗಳಿಗೆ ವಚನ ಕೊಟ್ಟರು. ದುಶ್ಚಟ ತ್ಯಜಿಸುವ ವಚನ ನೀಡಿದ ಯುವಕರ ತಲೆಯ ಮೇಲೆ ತೀರ್ಥ ಹಾಕಿ ಆಶೀರ್ವಾದ ಮಾಡಿದರು.

ಪ್ರತಿ ಕುಟುಂಬಗಳು ಆರ್ಥಿಕವಾಗಿ ಸಬಲರಾಗಲು ಯುವಕರು ದುಡಿಯುವ ವಯಸ್ಸಿನಲ್ಲಿ ದುಶ್ಚಟಕ್ಕೆ ಬಲಿಯಾಗಬಾರದು. ಸದೃಢ ಸಮಾಜ ನಿರ್ಮಾಣಕ್ಕೆ ಆರೋಗ್ಯವಂತ ಯುವಕರ ಅಗತ್ಯವಿದೆ.

ಆದ್ದರಿಂದ ಯುವಕರು ದುಶ್ಚಟಗಳಿಂದ ದೂರವಿರಬೇಕು ಎಂದು ತಿಳಿವಳಿಕೆ ನೀಡಿದರು.

ಈ ಸಂದರ್ಭದಲ್ಲಿ ರಾಚಯ್ಯ ಮಠಪತಿ, ಶ್ರೀಶೈಲ ಗೊಂಗನವರ, ಶ್ರೀಶೈಲ ದೇಸಾಯಿ, ಕಾಡಪ್ಪ ದೇಸಾಯಿ, ಅಪ್ಪಾಸಾಹೇಬ ದೇವರವರ, ಅಕ್ಕನ ಬಳಗದ ತಾಯಂದಿರು, ಭಜನಾ ತಂಡದ ಸದಸ್ಯರು ಶ್ರೀಗಳೊಂದಿಗೆ ಪಾದ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

**ವರದಿ : ಡಾ. ಟಿ.ಪಿ. ಗಿರಡ್ಡಿ, ಜಮಖಂಡಿ.**

# Technology: ಸಖಿಯರ ಕನಸಿಗೆ ರೆಕ್ಕೆ ಕಟ್ಟಿದ ಡ್ರೋನ್

**ಹಬ್ಬ, ಜಾತ್ರೆ, ಸಮಾರಂಭಗಳಲ್ಲಿ ಡ್ರೋನ್ ಹಾರಾಟವನ್ನು ಬೆರಗಿನಿಂದ ನೋಡುತ್ತಿದ್ದ ಮಹಿಳೆಯರೇ ಈಗ ಅವುಗಳನ್ನು ಹಾರಿಸುತ್ತಾ, ಹೊಲಗದ್ದೆಗಳಲ್ಲಿ ರಾಸಾಯನಿಕ ಸಿಂಪಡಣೆ ಮಾಡುತ್ತಾ ಬದುಕಿಗೆ ಆದಾಯ ಮೂಲವನ್ನು ಕಂಡುಕೊಂಡಿದ್ದಾರೆ.**







ಕೊಪ್ಪಳಜಿಲ್ಲೆಯಗಂಗಾವತಿಯಲ್ಲಿ ಹೊಲದ ಬದುವಿನಲ್ಲಿ ನಿಂತು ಮಹಾದೇವಿ ಚಂದ್ರಶೇಖರ್ ಕಣ್ಣೆದುರು ಎತ್ತರದಲ್ಲಿ ಹಾರಾಡುತ್ತಿದ್ದ ಡ್ರೋನ್ ಅನ್ನು ನಿಯಂತ್ರಿಸುತ್ತಿದ್ದರೆ, ಸುತ್ತಲಿನ ಜನರಲ್ಲಿ ಅದೇನೋ ಕುತೂಹಲ. ಹೊಲದ ದಾರಿಗುಂಟ ಹೋಗುವವರು, ಚಕ್ಕಡಿ ಬಂಡಿಯಲ್ಲಿ ಸಾಗುವವರು ಕೆಲ ಹೊತ್ತು ನಿಂತು ಡ್ರೋನ್ ಹಾರಾಟದ ಕ್ಷಣಗಳನ್ನು ಕಣ್ಣರಳಿಸಿಕೊಂಡು ನೋಡುತ್ತಿದ್ದರು. ಮಹಾದೇವಿಗೆ ಕೃಷಿ ಕಾಯಕ ಹೊಸದೇನಲ್ಲ. ಆದರೆ ಮೊದಲ ಬಾರಿಗೆ ಅವರಿಂದ ನಿಯಂತ್ರಿಸಲ್ಪಡುತ್ತಿದ್ದ ಡ್ರೋನ್ ಸದ್ದು ಅವರಲ್ಲಿ ಕೌತುಕ ಮೂಡಿಸುತ್ತಿದೆ.

ಕಣ್ಣುಹಾಯಿಸಿದಷ್ಟೂದೂರಭತ್ತದ ಸಸಿಗಳೇ ಕಾಣುವ ಗಂಗಾವತಿ ಹಾಗೂ ಸುತ್ತಮುತ್ತಲಿನ ಹಸಿರು ಪರಿಸರದಲ್ಲಿ ಈಗ ಡ್ರೋನ್‌ಗಳು ಸದ್ದುಮಾಡುತ್ತಿವೆ.ಗಂಗಾವತಿಯ ಚಿಕ್ಕಜಂತಕಲ್‌ನ ಮಹಾದೇವಿ ಅವರು ಪುಟ್ಟ ರೈಸ್‌ಮಿಲ್ ಹೊಂದಿದ್ದಾರೆ. ಸಾವಯವ ಕೃಷಿ ಬಿತ್ತನೆ ಬೀಜಗಳ ಬ್ಯಾಂಕ್ ಮಾಡಿದ್ದಾರೆ. ಭತ್ತ ಕೃಷಿಯಲ್ಲಿ ಪರಿಣತಿ ಹೊಂದಿದ್ದು ಭತ್ತದ 80 ತಳಿಗಳನ್ನು ಸಂಗ್ರಹಿಸಿದ್ದಾರೆ. ಅದರಲ್ಲಿ ಹತ್ತು ತಳಿಗಳನ್ನು ತಾವೇ ಬೆಳೆದಿದ್ದಾರೆ.

ಕೃಷಿಯಲ್ಲಿನ ತಂತ್ರಜ್ಞಾನ ಬಳಕೆಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಿರುವ ಮಹಾದೇವಿ, ಕೇಂದ್ರ ಸರ್ಕಾರದ 'ನಮೋ ಡ್ರೋನ್ ದೀದಿ' ಯೋಜನೆಯ ಸೌಲಭ್ಯ ಪಡೆದು ಚೆನ್ನೈ ಹಾಗೂ ಹೈದರಾಬಾದ್‌ನಲ್ಲಿ ಡ್ರೋನ್ ಮೂಲಕ ಬೆಳೆಗಳಿಗೆ ದ್ರವರೂಪದ ರಾಸಾಯನಿಕ ಸಿಂಪಡಣೆ ಮಾಡುವ ಕೌಶಲ ಕಲಿತಿದ್ದಾರೆ. ಎಸ್ಸೆಸ್ಸೆಲ್ಸಿ ಓದಿರುವ ಮಹಾದೇವಿ ಮೊದಲು ಭತ್ತದ ಬೀಜ ಬ್ಯಾಂಕ್, ಮನೆ ಹಾಗೂ ಹೊಲದ ಕೆಲಸಕ್ಕೆ ಮಾತ್ರ ತಮ್ಮ ಬದುಕು ಸೀಮಿತಗೊಳಿಸಿಕೊಂಡಿದ್ದರು. ಈಗ ಸ್ವಾವಲಂಬಿ ಬದುಕಿಗೆ ಹೊಸ ಹಾದಿ ಸಿಕ್ಕಿದೆ.

ವರ್ಷಗಳು ಉರುಳಿದಂತೆ ಕೃಷಿ ಕಾಯಕ ಮಾಡುವ ಕಾರ್ಮಿಕರ ಕೊರತೆ ವ್ಯಾಪಕವಾಗತೊಡಗಿತು. ಅದರಲ್ಲಿಯೂ ಅಪಾಯ ಹೆಚ್ಚು ಎನ್ನುವ ಕಾರಣಕ್ಕೆ ಭತ್ತಕ್ಕೆ ರಾಸಾಯನಿಕ ಸಿಂಪಡಣೆ ಮಾಡುವ ಕೆಲಸಕ್ಕೆ ಕಾರ್ಮಿಕರಿಗಾಗಿ ಸಾಕಷ್ಟು ಅಲೆದಾಡಬೇಕಾದ ಸ್ಥಿತಿ ನಿರ್ಮಾಣವಾಯಿತು. ಈ ಎಲ್ಲ ಸಮಸ್ಯೆ ಅರಿತ ಮಹಾದೇವಿ ಡ್ರೋನ್ ಹಾರಿಸುವ ತರಬೇತಿ ಪಡೆದರು.

'ಡ್ರೋನ್ ದೀದಿ' ಯೋಜನೆಯ ಸಂಪೂರ್ಣ ಲಾಭ ಪಡೆದುಕೊಂಡ ಮಹಾದೇವಿ ಈಗ ಸ್ವಾಭಿಮಾನದ ಬದುಕು ಹಾಗೂ ಆರ್ಥಿಕ ಸ್ವಾವಲಂಬನೆ ಗಳಿಸಿಕೊಂಡಿದ್ದಾರೆ. ಕೃಷಿ ಚಟುವಟಿಕೆಗಳಲ್ಲಿ ಸುಲಭವಾಗಿ ಡ್ರೋನ್ ಬಳಕೆ ಕುರಿತು ಬೇರೆಯವರಿಗೂ ಅರಿವು ಮೂಡಿಸುತ್ತಿದ್ದಾರೆ. ರಾಸಾಯನಿಕ ಸಿಂಪಡಣೆ ಮಾಡಿದರೆ ಪ್ರತಿ ಎಕರೆಗೆ ?350ರಿಂದ ?400 ಸಿಗುತ್ತಿದೆ.

**ಹನ್ನೆರಡು ಸಖಿಯರ ಹಂಬಲ**

ಗಂಗಾವತಿ ತಾಲ್ಲೂಕಿನ ಮುಷ್ಟೂರು ಗ್ರಾಮದ ಶಾಂತಾ ಅವರದೂ ಇದೇ ರೀತಿಯ ಸ್ವಾವಲಂಬಿ ಬದುಕಿನ ಕಥನವಿದೆ. ಓದಿದ್ದು ಪಿಯುಸಿ. ಕೃಷಿಯಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಎರಡು ಎಕರೆ ಹೊಲ ನಿರ್ವಹಣೆ ಮಾಡುತ್ತಾರೆ. ಕಾಲೇಜು ಶಿಕ್ಷಣ ಬಿಟ್ಟು ಎರಡು ದಶಕಗಳೇ ಕಳೆದಿರುವ ಶಾಂತಾ ಅವರಿಗೆ ಕೃಷಿಯಲ್ಲಿ ಹೊಸ ತಂತ್ರಜ್ಞಾನಗಳ ಬಳಕೆ ಕಲಿತುಕೊಳ್ಳುವ ತುಡಿತವಿದೆ.

ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿಯಲ್ಲಿ ಕೃಷಿ ಸಖಿಯಾಗಿ ಕೆಲಸ ಮಾಡುವ ಜೊತೆಗೆ ಡ್ರೋನ್ ನಿರ್ವಹಣೆಯ ತಂತ್ರಜ್ಞಾನದ ತರಬೇತಿ ಪಡೆದಿದ್ದಾರೆ. ಗಂಗಾವತಿ ಸಮೀಪದ ಮರಳಿ ಗ್ರಾಮದ ನಾಗರತ್ನ ಎ., ತುಳಸಿ ನೆಕ್ಕಂಟಿ, ಕುಕನೂರು ತಾಲ್ಲೂಕಿನ ಮಹಿಳೆಯರು ಹೀಗೆ ಕೊಪ್ಪಳ ಜಿಲ್ಲೆಯ ಹನ್ನೆರಡು ಸಖಿಯರು ಡ್ರೋನ್ ಹಾರಿಸುವ ಕೌಶಲಗಳ ತರಬೇತಿ ಪಡೆದಿದ್ದಾರೆ. ಅವರಿಗೆ ಪರವಾನಗಿಯೂ ಲಭಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಮನೆಗಷ್ಟೇ ಸೀಮಿತ ಎನ್ನುವ ಸ್ಥಿತಿಯಲ್ಲಿದ್ದ ಈ ಮಹಿಳೆಯರು ಈಗ ಬೇರೆಯವರಿಗೂ ಡ್ರೋನ್ ನಿರ್ವಹಣೆ ಪಾಠ ಹೇಳಿಕೊಡುತ್ತಿದ್ದಾರೆ.

ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಬರುವ ಗಂಗಾವತಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳು ನೀರಾವರಿ ಪ್ರದೇಶವಾದ ಕಾರಣ ಹೆಚ್ಚು ಭತ್ತ ಬೆಳೆಯಲಾಗುತ್ತದೆ. ಹೆಚ್ಚು ಕೀಟನಾಶಕ ಮತ್ತು ರಸಗೊಬ್ಬರ ಬಳಕೆಯಿಂದ ವಾತಾವರಣದಲ್ಲಿನ ಗಾಳಿ ಮತ್ತು ನೀರು ಕಲುಷಿತಗೊಂಡು ಮಣ್ಣಿನ ಫಲವತ್ತತೆಯೂ ಕಡಿಮೆಯಾಗಿ ಭೂಮಿ ಸವಕಳಾಗುತ್ತಿದೆ. ಈ ಸಮಸ್ಯೆಗೂ ಡ್ರೋನ್ ಮೂಲಕ ರಾಸಾಯನಿಕ ಸಿಂಪಡಣೆ ಪರಿಹಾರ ಒದಗಿಸುತ್ತಿದೆ ಎನ್ನುತ್ತಾರೆ ಡ್ರೋನ್ ಸಖಿಯರು. ಡ್ರೋನ್ ಮೂಲಕ ರಾಸಾಯನಿಕ ಸಿಂಪಡಣೆಯಿಂದ ಔಷಧೀಯ ಚಿಕ್ಕ ಕಣಗಳು ನೇರವಾಗಿ ಎಲೆಗಳ ಮೇಲಷ್ಟೇ ಬೀಳುತ್ತವೆ. ಸಸಿಗಳ ಸಂಪೂರ್ಣ ಭಾಗಗಳಿಗೆ ಮೇಲಿನಿಂದ ರಾಸಾಯನಿಕ ಬೀಳುವುದರಿಂದಫಸಲೂಚೆನ್ನಾಗಿ ಬರುತ್ತದೆ. ಔಷಧ ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚಿರುವುದರಿಂದ ಕೀಟಗಳ ನಿರ್ವಹಣೆಗೆ ಅನುಕೂಲವಾಗುತ್ತದೆ. ಡ್ರೋನ್ ಬಳಕೆ ಮಾಡದೇ ಕೈ ಪಂಪ್‌ನಿಂದ ಸಿಂಪಡಣೆ ಮಾಡಲಾಗುತ್ತಿದ್ದ ರಾಸಾಯನಿಕ ಬೆಳೆಗಳ ಜೊತೆಗೆ ಭೂಮಿಗೂ ಬೀಳುತ್ತಿದ್ದರಿಂದ ಭೂಮಿಯ ಫಲವತ್ತತೆ ಸಾಕಷ್ಟು ಹಾಳಾಗುತ್ತಿತ್ತು. ಈ ಸಮಸ್ಯೆಗೆ ಡ್ರೋನ್ ಮೂಲಕ ರಾಸಾಯನಿಕ ಸಿಂಪಡಣೆ ಪರಿಹಾರವಾಗುತ್ತಿದೆ.

**ಸಮಯ ಉಳಿತಾಯ**

ಬೆಳೆಗಳಿಗೆ ರಾಸಾಯನಿಕ ಸಿಂಪಡಣೆಗೆ ಕಾರ್ಮಿಕರ ಕೊರತೆ ಒಂದೆಡೆಯಾದರೆ, ಒಂದು ಎಕರೆ ಹೊಲಕ್ಕೆ ಔಷಧ ಸಿಂಪಡಣೆ ಮಾಡಲು ಕನಿಷ್ಠ ನಾಲ್ಕೈದು ತಾಸು ಬೇಕಾಗುತ್ತಿತ್ತು. ಆದರೆ ಡ್ರೋನ್ ನೆರವಿನಿಂದ ಗರಿಷ್ಠ ಹತ್ತು ನಿಮಿಷಗಳಲ್ಲಿ ಈ ಕೆಲಸ ಮುಗಿಯುತ್ತದೆ. ವರ್ಷದಲ್ಲಿ ಎರಡು ಭತ್ತದ ಬೆಳೆ ಬೆಳೆಯುವ ಋತುವಿನಲ್ಲಿ ಈ ಡ್ರೋನ್ ಸಖಿಯರಿಗೆ ಕೈ ತುಂಬಾ ಕೆಲಸ.

ಕೊಪ್ಪಳ ಜಿಲ್ಲೆಯ ಡ್ರೋನ್ ಸಖಿಯರು ಚೆನ್ನೈ ಮತ್ತು ಹೈದರಾಬಾದ್ ಏರೋನಾಟಿಕ್ಸ್ ಕೇಂದ್ರದಲ್ಲಿ ವರ್ಷದ ಹಿಂದೆ ತರಬೇತಿ ಪಡೆದಿದ್ದು ಈಗ ಪ್ರಾಯೋಗಿಕ ಪರೀಕ್ಷೆ ಆರಂಭಿಸಿ ಯಶಸ್ಸು ಕಂಡಿದ್ದಾರೆ. ಇನ್ನೂ ಕೆಲವರು ಮೈಸೂರಿನಲ್ಲಿ ತರಬೇತಿ ಪಡೆದಿದ್ದಾರೆ. ಕೀಟನಾಶಕ ಮತ್ತು ದ್ರವರೂಪದ ರಾಸಾಯನಿಕ ಗೊಬ್ಬರ ಭತ್ತ, ಮೆಕ್ಕೆಜೋಳ, ತೊಗರಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಿಂಪಡಣೆ ಮಾಡಿ ಪ್ರಯೋಗ ಮಾಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮನೆ ಹಾಗೂ ಹೊಲದ ಕೆಲಸವೇ ತಮ್ಮ ಬದುಕು ಎಂದುಕೊಂಡಿದ್ದ ಮಹಿಳೆಯರಲ್ಲಿ ಈಗ ಡ್ರೋನ್ ಹಾರಿಸುವಾಗ ಬರುವ ಗಾಳಿ ಬದುಕಿಗೂ ತಂಗಾಳಿಯಂತೆ ಭಾಸವಾಗಿದೆ.

**'ಮನೆ ಜವಾಬ್ದಾರಿ ನಿರ್ವಹಣೆಗೆ ಸಹಕಾರಿ'**

'ಜಾತ್ರೆ ಹಾಗೂ ಇನ್ನಿತರ ಸಮಾರಂಭಗಳಲ್ಲಿ ಡ್ರೋನ್ ಮೂಲಕ ಚಿತ್ರೀಕರಣ ಮಾಡುವುದನ್ನುನೋಡಿಡ್ರೋನ್ ಹಾರಿಸುವುದನ್ನು ಕಲಿಯಬೇಕು ಎನ್ನುವಆಸೆಮೂಡುತ್ತಿತ್ತು.ಹಿಂದೆ ದೂರದಲ್ಲಿ ಡ್ರೋನ್ ಹಾರುತ್ತಿದ್ದರೆ ನನ್ನ ಮನಸ್ಸಿನಲ್ಲಿಯೂ ಇದೇ ಆಸೆ ಚಿಗುರೊಡೆಯುತ್ತಿತ್ತು. ಈ ಕಾರಣದಿಂದಾಗಿ ದೂರದ ಊರುಗಳಿಗೆ ಹೋಗಿ ತರಬೇತಿ ಪಡೆದಿದ್ದೇನೆ. ನನ್ನ ಆಸೆ ಈಗ ಆದಾಯ ಗಳಿಕೆಗೂ ಅನುಕೂಲವಾಗಿದೆ.ಹೆಣ್ಣುಮಕ್ಕಳು ಆರ್ಥಿಕ ಸ್ವಾವಲಂಬಿಗಳಾಗಿ ತಮ್ಮ ಮನೆಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸಲು ಡ್ರೋನ್ ನಿರ್ವಹಣೆಯಿಂದ ಬರುವ ಆದಾಯ ಸಹಕಾರಿಯಾಗಿದೆ. ಋತುವಿನಲ್ಲಿ ನಿತ್ಯವೂ ಕೆಲಸವಿರುತ್ತದೆ' ಎನ್ನುತ್ತಾರೆ ಮಹಾದೇವಿ.

***

**ಕೃಪೆ : ಪ್ರ.ವಾ.**

# ಕೋಚಿಂಗ್ ವ್ಯೂಹದಲ್ಲಿ ವಿದ್ಯಾರ್ಥಿ ವೃಂದ

## ಕೋಚಿಂಗ್‌ನ ಅಡ್ಡಪರಿಣಾಮಗಳಿಗೆ ಕಡಿವಾಣ ಹಾಕುವ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಿದೆ

ಸ್ನೇಹಿತರೊಬ್ಬರ ಮಗಳ ದ್ವಿತೀಯ ಪಿಯುಸಿ ಫಲಿತಾಂಶ ಏನಾಯಿತು ಎಂದು ವಿಚಾರಿಸಿದಾಗ 'ಅಷ್ಟೇನೂ ಚೆನ್ನಾಗಿ ಸ್ಕೋರ್ ಆಗಿಲ್ಲ ಸರ್, ಒಳ್ಳೆಯ ಕಾಲೇಜು ಮತ್ತು ಫೇಮಸ್ ಕೋಚಿಂಗ್ ಸೆಂಟರ್ ಎರಡಕ್ಕೂ ಸೇರಿಸಿದ್ದೆ, ಏನೂ ಪ್ರಯೋಜನವಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು. 'ಕಾಲೇಜಿನ ಶುಲ್ಕಕ್ಕಿಂತ ಡಬಲ್ ಹಣ ಪೇ ಮಾಡಿದ್ದೆ, ಟ್ಯೂಷನ್ ಸೆಂಟರ್‌ನವರು ಮೋಸ ಮಾಡಿಬಿಟ್ರು' ಎಂದವರೇ 'ಕಾಲೇಜಿನವರು ಹೇಳಿಕೊಟ್ಟದ್ದನ್ನೇ ಕಲಿತಿದ್ದರೆ ಸಾಕಿತ್ತು ಅಂತ ಈಗ ಅನ್ನಿಸುತ್ತಿದೆ' ಎಂದು ಮರುಗಿದರು.

ಕರ್ನಾಟಕದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿ ಮೂರು ವಾರಗಳಾಗಿವೆ. ಹೆಚ್ಚಿನ ಅಂಕ ಪಡೆದವರು ಸಂಭ್ರಮದಲ್ಲಿದ್ದಾರೆ. ಕಡಿಮೆ ಪಡೆದವರು ಮರುಪರೀಕ್ಷೆ ಬರೆಯಲು ಸಜ್ಜಾಗುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಶುಲ್ಕ ಕಟ್ಟಿ ಒಳ್ಳೆಯ ಕಾಲೇಜು, ಪ್ರತಿಷ್ಠಿತ ಕೋಚಿಂಗ್ ಸೆಂಟರ್‌ಗಳಿಗೆ ಸೇರಿಸಿದ್ದರೂ ಮಕ್ಕಳಿಗೆ ಬರಬೇಕಾಗಿದ್ದ ಅಂಕಗಳು ಬಂದಿಲ್ಲ ಎಂಬ ಬೇಜಾರಿನಲ್ಲಿರುವ ಪೋಷಕರು, ಶಿಕ್ಷಣ ವ್ಯವಸ್ಥೆಯ ಬಗ್ಗೆ ಭ್ರಮನಿರಸನಗೊಂಡಿದ್ದಾರೆ.

ಶಾಲೆ? ಕಾಲೇಜುಗಳಿಗೆ ಮಕ್ಕಳನ್ನು ಸೇರಿಸುವುದಕ್ಕಿಂತ ಮುಂಚೆ ಪ್ರತಿಷ್ಠಿತ ಕೋಚಿಂಗ್ ಸೆಂಟರ್ ಹುಡುಕುವ ಪರಿಪಾಟ ನಮ್ಮಲ್ಲಿ ಜಾಸ್ತಿಯಾಗಿದೆ. ಕೆಲವು ಪ್ರತಿಷ್ಠಿತ ಕೋಚಿಂಗ್ ಕೇಂದ್ರಗಳಲ್ಲಿ ದಾಖಲಾತಿ ಪಡೆಯಲು ಹಣವಷ್ಟೇ ಅಲ್ಲ ಮಂತ್ರಿಗಳ ಶಿಫಾರಸು ಸಹ ಬೇಕಾಗುತ್ತದೆ! ಕೋಚಿಂಗ್ ಸೆಂಟರ್ ಸೇರಿಕೊಳ್ಳುವ ವಿದ್ಯಾರ್ಥಿಗಳು ಕಾಲೇಜಿನ ಪಾಠ, ಪ್ರಯೋಗಗಳಿಗಿಂತ ಕೋಚಿಂಗ್ ಕೇಂದ್ರದ ಕೆಲಸಗಳಿಗೆ ಆದ್ಯತೆ ನೀಡುತ್ತಾರೆ. ವಾರ್ಷಿಕ ಪರೀಕ್ಷೆ ಬರೆಯಲು ಒಂದು ಕಾಲೇಜು ಬೇಕಲ್ಲ ಎಂದು ಅಲ್ಲಿಗೆ ಸೇರಿಕೊಂಡಿರುತ್ತಾರೆ. ಕಾಲೇಜಿನ ಪಾಠವೇನಿದ್ದರೂ ಸೆಕೆಂಡರಿ, ಟ್ಯೂಷನ್‌ನಲ್ಲಿ ಹೇಳಿಕೊಡುವುದೇ ಮುಖ್ಯ ಎಂಬ ಭಾವನೆ ಅನೇಕ ಮಕ್ಕಳು ಹಾಗೂ ಪೋಷಕರಲ್ಲಿದೆ.

ಇದನ್ನೇ ಬಂಡವಾಳ ಮಾಡಿಕೊಳ್ಳುವ ಕೋಚಿಂಗ್ ಸೆಂಟರ್‌ನವರು, ವಿಶೇಷ ಡಿಜಿಟಲ್ ಸಾಧನ–ಸೌಲಭ್ಯಗಳನ್ನು ಬಳಸಿ ಪಾಠ ಮಾಡುತ್ತೇವೆ, ನಮ್ಮಲ್ಲಿ ನುರಿತ ಅಧ್ಯಾಪಕರಿದ್ದಾರೆ, ಪ್ರತಿದಿನ ಬೆಳಿಗ್ಗೆ ಪರೀಕ್ಷೆ ನಡೆಸುತ್ತೇವೆ, ನೀಟ್, ಜೆಇಇ ಪಾಸಾದವರಿಂದ ಕೋಚಿಂಗ್ ಕೊಡಿಸುತ್ತೇವೆ, ಆಲ್ ಇಂಡಿಯಾ ಲೆವೆಲ್‌ನಲ್ಲಿ ನಮ್ಮ ವಿದ್ಯಾರ್ಥಿಗಳು ಉತ್ತಮ ರ್‍ಯಾಂಕ್‌ನೊಂದಿಗೆ ಪ್ರತಿಷ್ಠಿತ ಕಾಲೇಜುಗಳಲ್ಲಿ ಸೀಟು ಪಡೆದುಕೊಂಡಿದ್ದಾರೆ ಎಂದೆಲ್ಲ ಜಾಹೀರಾತು ನೀಡಿ ಜನರನ್ನು ಆಕರ್ಷಿಸುತ್ತಾರೆ. ಇದನ್ನು ನಂಬಿ ವಿದ್ಯಾರ್ಥಿಗಳು ಕೋಚಿಂಗ್ ಕೇಂದ್ರಗಳಿಗೆ ಸೇರಿಕೊಳ್ಳುತ್ತಾರೆ.

ಕಾಲೇಜಿನವರು ಹೇಳಿಕೊಡುವುದು ಸಾಕಾಗುವುದಿಲ್ಲ ಅಂತಲೋ ಕಾಲೇಜಿನಲ್ಲಿ ಟೀಚಿಂಗ್ ಸರಿ ಇಲ್ಲ ಎಂದೋ ಕೋಚಿಂಗ್ ಕ್ಲಾಸ್‌ಗೆ ಹಾಕಿದ್ದೇವೆ ಎನ್ನುವ ಪೋಷಕರು ಹೆಜ್ಜೆಗೊಬ್ಬರು ಸಿಗುತ್ತಾರೆ. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪ್ರಾಯೋಗಿಕ ತರಗತಿ, ಟರ್ಮ್ ಟೆಸ್ಟ್, ವಿಶೇಷ ತರಗತಿ, ರೆಮೆಡಿಯಲ್ ಕ್ಲಾಸ್ (ಪರಿಹಾರ ಬೋಧನೆ) ಎಂದೆಲ್ಲ ಕನಿಷ್ಠ ಆರು ಗಂಟೆ ಪಾಠ ಕೇಳಿಸಿಕೊಳ್ಳುತ್ತಾರೆ. ನಂತರ ಬೆಂಗಳೂರಿನಂತಹ ಊರುಗಳಲ್ಲಿ ಮನೆಗೂ ತೆರಳದೆ ನೇರ ಕೋಚಿಂಗ್ ಕೇಂದ್ರಗಳಿಗೆ ಹೋಗಿ ಮೂರರಿಂದ ನಾಲ್ಕು ತಾಸು ಅಲ್ಲಿನ ಪಾಠಗಳಿಗೆ ಕಿವಿಯಾಗುತ್ತಾರೆ. ಅಲ್ಲಿ ನೀಡುವ



ಹೋಂವರ್ಕ್, ಟೆಸ್ಟ್‌ಗಳನ್ನು ಮಾಡಿ ಮುಗಿಸಿ ಮನೆ ತಲುಪುವ ವೇಳೆಗೆ ರಾತ್ರಿಯ ಊಟದ ಸಮಯ ಮುಗಿದಿರುತ್ತದೆ.

ಇಡೀ ದಿನ ದಣಿಯುವ ದೇಹ, ಮನಸ್ಸುಗಳಿಗೆ ವಿಶ್ರಾಂತಿಯ ವಿನಾ ಬೇರೇನೂ ಬೇಕೆನಿಸುವುದಿಲ್ಲ. ಆದರೂ ಮನೆಯವರ ಒತ್ತಾಯಕ್ಕೆ ಊಟದ ಶಾಸ್ತ್ರ ಮಾಡುವ ವಿದ್ಯಾರ್ಥಿಗಳು ಊಟವಾದ ತಕ್ಷಣ ನಿದ್ರೆಗೆ ಜಾರುತ್ತಾರೆ. ವರ್ಷದಲ್ಲಿ ಏಳೆಂಟು ತಿಂಗಳು ಹೀಗೇ ನಡೆಯುತ್ತಿರುತ್ತದೆ. ಹೊತ್ತಿಗೆ ಸರಿಯಾಗಿ ಊಟ, ವಿಶ್ರಾಂತಿ ದೊರಕದೆ ಮಕ್ಕಳು ಮಾನಸಿಕ ಹಾಗೂ ದೈಹಿಕವಾಗಿ ಬಳಲುತ್ತಾರೆ. ಆಟೋಟಗಳಿಗೆ ಸಮಯವೇ ದೊರಕುವುದಿಲ್ಲ. ಎಷ್ಟೋ ಶಾಲಾ–ಕಾಲೇಜುಗಳ ವೇಳಾಪಟ್ಟಿಯಲ್ಲಿ ಮನಸ್ಸನ್ನು ಪ್ರಫುಲ್ಲಗೊಳಿಸುವ, ಒತ್ತಡ ನಿವಾರಿಸುವ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶವೇ ಇರುವುದಿಲ್ಲ.

ಒಂದನೇ ತರಗತಿಯಿಂದಲೇ ಮಕ್ಕಳನ್ನು ಮನೆಪಾಠಕ್ಕೆ ಕಳುಹಿಸುವ ಪೋಷಕರಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಹಂತದಲ್ಲಿ ಕೋಚಿಂಗ್ ಇಲ್ಲದಿದ್ದರೆ ಭವಿಷ್ಯವೇ ಇಲ್ಲ ಎಂಬ ಭಾವನೆ ಇದೆ. ಕಾಲೇಜಿನ ಶುಲ್ಕಕ್ಕಿಂತ ಕೋಚಿಂಗ್ ಕೇಂದ್ರದ ಶುಲ್ಕ ಹೆಚ್ಚಿರುತ್ತದೆ. ಆದರೂ ಕೋಚಿಂಗ್ ಕೇಂದ್ರಗಳು ಭರ್ತಿಯಾಗಿರುತ್ತವೆ. ಐಐಟಿ ಮತ್ತು ಜೆಇಇ ಪರೀಕ್ಷೆಯ ತಯಾರಿಗೆ ಬೆಂಗಳೂರು, ಮಂಗಳೂರಿನ ಕೋಚಿಂಗ್ ಕೇಂದ್ರಗಳು ಸಾಲದು ಎನ್ನುವವರು ಹೆಚ್ಚಿನ ಕೋಚಿಂಗ್‌ಗಾಗಿ ರಾಜಸ್ಥಾನದ 'ಕೋಟ'ಗೆ ತೆರಳುತ್ತಾರೆ. ಅಲ್ಲಿನ ಕೋಚಿಂಗ್ ಕೇಂದ್ರಗಳಲ್ಲಿ ಕಲಿತರೆ ಉತ್ತಮ ರ್‍ಯಾಂಕ್ ಸಿಗುವುದು ಗ್ಯಾರಂಟಿ ಎಂಬ ನಂಬಿಕೆ ಇದೆ. ಲಾಂಗ್ ಟರ್ಮ್ ಕೋಚಿಂಗ್ ಹೆಸರಿನಲ್ಲಿ ಕುಟುಂಬಗಳೇ ಒಂದೆರಡು ವರ್ಷಗಳ ಮಟ್ಟಿಗೆ ಕೋಟಕ್ಕೆ ಸ್ಥಳಾಂತರಗೊಳ್ಳುವುದೂ ಇದೆ.

ಇತ್ತೀಚಿನ ದಿನಗಳಲ್ಲಿ ಕಲಿಕೆಯ ಒತ್ತಡ ತಾಳಲಾಗದೆ, ಅಂದುಕೊಂಡ ಫಲಿತಾಂಶ ದೊರಕದೆ ನಿರಾಶರಾಗುವ ಅನೇಕ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. 2023ರಲ್ಲಿ ಕೋಟದಲ್ಲಿ 26 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು. ಇದರ ಹಿಂದಿನ ವರ್ಷ ಇಡೀ ದೇಶದಲ್ಲಿ ಪರೀಕ್ಷಾ ಕಾರಣಗಳಿಗಾಗಿ 13,044 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದರು. ಮನೆಯವರ ಒತ್ತಾಸೆ, ಶೈಕ್ಷಣಿಕ ಒತ್ತಡ, ಸಂಪನ್ಮೂಲಗಳ ಕೊರತೆ, ಅನಾರೋಗ್ಯವು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ದುರ್ಬಲಗೊಳಿಸಿಬಿಡುತ್ತವೆ.

ನೀಟ್ ಮತ್ತು ಜೆಇಇ ಪರೀಕ್ಷೆಗಳ ತಯಾರಿ ಒಂದು ರೀತಿಯಲ್ಲಿ 7ನೇ ತರಗತಿಯಿಂದಲೇ ಶುರುವಾಗುತ್ತದೆ. ದಿನಕ್ಕೆ 16–18 ಗಂಟೆಗಳ ಕಾಲ ಓದುವುದರಲ್ಲಿ ಮಗ್ನರಾಗುವ ಎಳೆಯರು ಬರೀ ಆರು ಗಂಟೆ ನಿದ್ರಿಸುತ್ತಾರೆ. ಓದಿನ ಜೊತೆ ಆಟೋಟ, ವಿನೋದಗಳಲ್ಲಿ ಸಮಯ ಕಳೆಯಬೇಕಾದ ಮಕ್ಕಳು ಪೋಷಕರ ನಿರ್ಧಾರದಂತೆ ಕೋಚಿಂಗ್ ವ್ಯವಸ್ಥೆಯ ಭಾಗವಾಗಿ ಶಾಲೆ, ಟ್ಯೂಷನ್, ವಿಶೇಷ ತರಗತಿ, ಮಾಕ್ ಎಕ್ಸಾಮ್ ಎಂದೆಲ್ಲ ಸದಾ ಪುಸ್ತಕಗಳ ಜೊತೆಯೇ ಇರುತ್ತಾರೆ.

ಕೋಚಿಂಗ್‌ನ ಅಡ್ಡಪರಿಣಾಮಗಳಿಗೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ಹಲವು ಕಠಿಣ ನಿಯಮಗಳನ್ನು ರೂಪಿಸಿದೆ. 16ರ ವಯಸ್ಸಿಗಿಂತ ಕಡಿಮೆ ಇರುವ ಮಕ್ಕಳನ್ನು ಕೋಚಿಂಗ್ ಕೇಂದ್ರಗಳಿಗೆ ಸೇರಿಸಿಕೊಳ್ಳುವಂತಿಲ್ಲ, ಕೋಚಿಂಗ್ ಉದ್ಯಮವು ಗ್ರಾಹಕ ರಕ್ಷಣಾ ಕಾಯ್ದೆಗೆ ಒಳಪಡುತ್ತದೆ, ವಿದ್ಯಾರ್ಥಿಯು ತರಬೇತಿಯ ನಡುವೆಯೇ ಕೋಚಿಂಗ್ ಕೇಂದ್ರ ತೊರೆದರೆ ಶುಲ್ಕದ ಇಂತಿಷ್ಟು ಭಾಗವನ್ನು ಹಿಂದಿರುಗಿಸಬೇಕು, ಕೋಚಿಂಗ್ ಸಂಸ್ಥೆಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು, ಸುವ್ಯವಸ್ಥಿತವಾದ ಜಾಗದಲ್ಲಿ ತರಗತಿ ನಡೆಸಬೇಕು ಮತ್ತು ಕೋಚಿಂಗ್ ನೀಡುವ ಶಿಕ್ಷಕರು ಪದವಿ ವಿದ್ಯಾಭ್ಯಾಸವನ್ನು ಪೂರೈಸಿರಲೇಬೇಕು ಎಂಬ ನಿಯಮಗಳಿವೆ. ರಾಜ್ಯ ಸರ್ಕಾರಗಳು ಇವುಗಳನ್ನು ಜಾರಿಗೆ ತರಬೇಕಿದೆ.

ಕೋಚಿಂಗ್ ವ್ಯವಸ್ಥೆ ಈಗ ಸಮಾನಾಂತರ ಶಿಕ್ಷಣ ಎನಿಸಿದೆ. ನಾಗರಿಕ ಸೇವೆ, ಬ್ಯಾಂಕ್, ರೈಲ್ವೆ, ಟೋಫೆಲ್, ಜಿಆರ್‌ಇ, ಪೊಲೀಸ್ ನೇಮಕಾತಿ ಪರೀಕ್ಷೆಗಳಿಗೆ ತರಬೇತಿಯ ಅವಶ್ಯಕತೆ ಇದೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವವರಷ್ಟೇ ಅಲ್ಲ, 7ನೇ ತರಗತಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆ ಎದುರಿಸುವವರು ಸಹ ಕೋಚಿಂಗ್ ಬಯಸುತ್ತಾರೆ. ಕೋಚಿಂಗ್ ವ್ಯವಸ್ಥೆ ಬಲಗೊಳ್ಳಲು ಮತ್ತು ವ್ಯಾಪಿಸಲು ಶಾಲಾ ವ್ಯವಸ್ಥೆಯಲ್ಲಿನ ದೋಷಗಳೇ ಕಾರಣ ಎಂಬ ಮಾಹಿತಿ ಇದೆ. ಶಾಲೆ ಕಾಲೇಜುಗಳಲ್ಲಿನ ಮೂಲ ಸೌಲಭ್ಯ ಕೊರತೆ, ಕಲಿಕಾ ಸಾಮಗ್ರಿ, ನುರಿತ ಅಧ್ಯಾಪಕರ ಅನುಪಸ್ಥಿತಿಯಿಂದಾಗಿ ಪೋಷಕರು ಮಕ್ಕಳ ಭವಿಷ್ಯವನ್ನು ಸದೃಢಗೊಳಿಸಲು ಕೋಚಿಂಗ್ ಕೇಂದ್ರಗಳ ಮೊರೆ ಹೋಗುತ್ತಾರೆ.

ಕೋಚಿಂಗ್ ಅನಿವಾರ್ಯವೇ? ಖಂಡಿತ ಇಲ್ಲ. ಆದರೆ ಕಲಿಕೆಯಲ್ಲಿ ಹಿಂದುಳಿದವರಿಗೆ ಅದರಿಂದ ಅನುಕೂಲವಾಗುತ್ತದೆ. ಬುದ್ಧಿವಂತರಿಗೆ ಹೆಚ್ಚಿನ ಬಲ ತುಂಬುತ್ತದೆ. ಹಲವರಿಗೆ ಯಶಸ್ಸು ಲಭಿಸಿದೆ. ಅತಿಯಾದ ಪೈಪೋಟಿ ಇರುವುದರಿಂದ ಪರೀಕ್ಷೆಗಳು ಕಠಿಣವಾಗುತ್ತಿವೆ. ಕಷ್ಟದ ಅಥವಾ ಸವಾಲಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಯಶಸ್ವಿಯಾಗಲು ವಿಶೇಷ ತರಬೇತಿ ಬೇಕು.

ಕೋಚಿಂಗ್ ಕೇಂದ್ರ ಸೇರಿಕೊಂಡಾಕ್ಷಣ ಬಯಸಿದ ಅಂಕಗಳು ಬರುತ್ತವೆ ಎಂದು ಯಾವ ಗ್ಯಾರಂಟಿಯೂ ಇಲ್ಲ. ಆದರೂ ಅದಕ್ಕೆ ಮುಗಿಬೀಳುವ ಪ್ರವೃತ್ತಿ ಕಡಿಮೆಯಾಗಿಲ್ಲ. ಮಕ್ಕಳು ಯಶಸ್ವಿ ಆಗಲಿ ಎಂದು ಬಯಸುವುದು ಪೋಷಕರ ತಪ್ಪಲ್ಲ. ಆದರೆ ಇದು ಆಗಲೇಬೇಕು, ಆಗದಿದ್ದರೆ ಭವಿಷ್ಯವೇ ಇಲ್ಲ ಎಂಬಂತೆ ಒತ್ತಡ ಹೇರಬಾರದು. ಶಾಲೆಗಳಲ್ಲಿ ಓದಿದ್ದನ್ನೇ ಓದಿಸುವ, ಬಾಯಿಪಾಠ ಮಾಡಿಸುವ ವಿಧಾನಗಳ ಬದಲಿಗೆ ಪರಿಕಲ್ಪನಾತ್ಮಕ ಮತ್ತು ಪ್ರಾಯೋಗಿಕ ಕಲಿಕೆಗಳನ್ನು ಪ್ರೋತ್ಸಾಹಿಸಿದರೆ ಮಾತ್ರ ವಿದ್ಯಾರ್ಥಿಗಳು ಕೋಚಿಂಗ್ ಕೇಂದ್ರಗಳತ್ತ ಸುಳಿಯುವುದನ್ನು ಕಡಿಮೆ ಮಾಡಬಹುದು ಮತ್ತು ಅನಗತ್ಯ ಒತ್ತಡ ತಪ್ಪಿಸಬಹುದು.

* * *

**ಕೃಪೆ : ಪ್ರ.ವಾ.**

# ಕುಟುಂಬದ ಏಳಿಗೆಗೆ ಮಹಿಳೆಯ ಶ್ರಮ ಶ್ಲಾಘನೀಯ: ಜಿ.ಪಂ.ಯೋಜನಾ ನಿರ್ದೇಶಕ ಪ್ರಕಾಶ ವಿ



**ಕೊಪ್ಪಳ :** ಹಗಲಿರುಳು ತನ್ನ ಕುಟುಂಬದ ಏಳ್ಗೆಗೆ ಶ್ರಮಿಸುತ್ತಿರುವ ಮಹಿಳೆಯ ಶ್ರಮ ಶ್ಲಾಘನೀಯವಾಗಿದೆಂದು ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಪ್ರಕಾಶ ವಿ. ಹೇಳಿದರು.

ಅವರು ಇತ್ತೀಚೆಗೆ ಗಿಣಿಗೇರಾದಲ್ಲಿ ಗ್ರಾಮ ಪಂಚಾಯತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಹಿಳಾ ಗ್ರಾಮಸಭೆಯಲ್ಲಿ ಜಿಲ್ಲಾ ನೋಡಲ್ ಅಧಿಕಾರಿಯಾಗಿ ಭಾಗವಹಿಸಿ ಮಾತನಾಡಿದರು.

ಇಂದಿನ ಯುಗ ಸ್ಪರ್ಧಾತ್ಮಕ ಯುಗವಾಗಿರುವದರಿಂದ ಮಹಿಳೆಯರು ಎಲ್ಲಾ ರಂಗದಲ್ಲಿ ಭಾಗವಹಿಸಿ ಸಬಲೀಕರಣವಾಗುತ್ತಿರುವದರಿಂದ ದೇಶ ಅಭಿವೃದ್ಧಿಯತ್ತ ಮುನ್ನಡೆಯಲು ಸಾಧ್ಯವಾಗಿದೆ. ಭಾರತ ಸಂವಿಧಾನವು ಕೂಡಾ ಮಹಿಳೆಯರಿಗೆ ಸಮಾನ ಮೀಸಲಾತಿ ಕಲ್ಪಿಸಿರುವದರಿಂದ ಅವರ ಹಕ್ಕುಗಳನ್ನು ಎತ್ತಿ ಹಿಡಿದಿದೆ. ದೇಶ ಅಭಿವೃದ್ಧಿ ಹೊಂದಿದೆ ಎಂದು ಹೇಳಬೇಕಾದರೆ ಅಲ್ಲಿನ ಮಹಿಳೆಯರಿಗೆ ನೀಡಿರುವ ಹಕ್ಕುಗಳ ಆಧಾರದ ಮೇಲೆ ನಿರ್ಧಾರಿತವಾಗಿರುತ್ತದೆ. ಮಹಿಳೆಯರು ಕುಟುಂಬದ ನೊಗವನ್ನು ಹೊತ್ತು ಜವಾಬ್ದಾರಿಯಿಂದ ಹಿಂದೆ ಸರಿಯದೇ ಮುನ್ನುಗ್ಗಿ ತನ್ನ ಶಕ್ತಿ ಮೀರಿ ತನ್ನ ಕುಟುಂಬಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಮಹಿಳೆ ಕೇವಲ ಕುಟುಂಬಕ್ಕೆ ಸೀಮಿತವಾಗಿರದೇ ತಾನು ಕೂಡಾ ಸಬಲೇ ಎನ್ನುವದನ್ನು ಕೆಲಸದ ಮೂಲಕ ತೋರ್ಪಡಿಸುತ್ತಿದ್ದಾಳೆ ಎಂದರು.

ಕೊಪ್ಪಳ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳ ಲಾಲನೆ–ಪಾಲನೆ, ಶಿಕ್ಷಣ, ಕುಟುಂಬ ನಿರ್ವಹಣೆ, ಕಛೇರಿ ಕೆಲಸ, ಶಿಕ್ಷಣ, ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಣೆ ಇತ್ಯಾದಿಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಸಮಾಜ ನೀಡಿದ ಗುರುತರ ಜವಾಬ್ದಾರಿಯನ್ನು ಸುಗಮವಾಗಿ ಸಾಗಿಸುತ್ತಿದ್ದಾರೆ. ಮಹಿಳೆಯರಿಗೆ ಉತ್ತಮ ವಾತಾವರಣ ಕಲ್ಪಿಸಲು ಎಲ್ಲರು ಶ್ರಮಿಸಬೇಕೆಂದು ಕರೆ ನೀಡಿದರು.

ತೊಗಲುಗೊಂಬೆಯಾಟದ ಖ್ಯಾತಿಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಭೀಮಮ್ಮಗೆ ಗೌರವ ಸನ್ಮಾನ: ಬಹು ವರ್ಷಗಳಿಂದ ತೊಗಲುಗೊಂಬೆ ಆಟವನ್ನು ದೇಶ–ವಿದೇಶಗಳಲ್ಲಿ ಪ್ರದರ್ಶಿಸಿ ವಿಖ್ಯಾತಿ ಹೊಂದಿರುವ ಮೋರನಾಳ ಗ್ರಾಮದ ಭೀಮಮ್ಮ ಇವರಿಗೆ ಇತ್ತೀಚಿಗೆ ರಾಷ್ಟ್ರಪತಿಗಳಿಂದ ಪದ್ಮಶ್ರೀ ಪ್ರಶಸ್ತಿಯನ್ನು ಸ್ವೀಕರಿಸಿದ ಭೀಮವ್ವ ಶಿಳ್ಳಿಕ್ಯಾತರ ಅವರು ಮಹಿಳಾ ಗ್ರಾಮಸಭೆಯಲ್ಲಿ ಭಾಗವಹಿಸಿದ ಪ್ರಯುಕ್ತ ಗ್ರಾಮ ಪಂಚಾಯತಿಯಿಂದ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಂಜಿತಾ ಯಮನೂರಪ್ಪ ಚವ್ಹಾಣ್, ತಾಲೂಕ ಪಂಚಾಯತಿ ಸಹಾಯಕ ನಿರ್ದೇಶಕ ಮಹೇಶ್, ಪಂಚಾಯತ ಅಭಿವೃದ್ಧಿ ಅಧಿಕಾರಿ ಮಂಜುಳಾ ದೇವಿ ಹೂಗಾರ,

ಗ್ರಾಮ ಪಂಚಾಯತಿ ಸದಸ್ಯರಾದ ಮಂಜುನಾಥ ಪಾಟೀಲ್, ಕರಿಯಪ್ಪ ಮೇಟಿ, ಲಕ್ಷ್ಮಣ ಡೊಳ್ಳಿನ, ಶಶಿಕಲಾ ಬಾಬು ಗುಡೆಕರ್, ಮೈಲಾರಪ್ಪ ಕುಡ್ಲಿ, ಸುಮಂಗಲಾ ಶೇಕಪ್ಪ ಇಂದರಗಿ, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಮರಿಯಪ್ಪ ಶಿಡ್ಲೆಪ್ಪನವರ, ಮಹಿಳಾ ಮತ್ತು ಮಕ್ಕಳ ರಕ್ಷಣಾ ಘಟಕದ ಸದಸ್ಯರು ಮಹಿಳಾ ಕಲ್ಯಾಣ ಇಲಾಖೆಯ ಸಿಬ್ಬಂದಿಗಳು, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಸಂಜೀವಿನಿ ಸಂಘದ ಮಹಿಳೆಯರು ಉಪಸ್ಥಿತರಿದ್ದರು.

# ಬ್ಯಾಟಿಂಗ್ ಮಾಡಿ ಟೂರ್ನಾಮೆಂಟ್ ಉದ್ಘಾಟಿಸಿದ ಶಾಸಕ



**ಇಳಕಲ್ :** ಕ್ರಿಕೆಟ್ ಪಂದ್ಯಾವಳಿಯನ್ನು ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಶಾಸಕ ವಿಜಯಾನಂದ ಕಾಶಪ್ಪನವರ ಬ್ಯಾಟ್ ಮಾಡುವ ಮೂಲಕ ಉದ್ಘಾಟಿಸಿದರು. ಇಲ್ಲಿನ ಧರ್ಮಗೌಡ ಪೇಟೆಯ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯನ್ನು ರಿಬ್ಬನ್ ಕತ್ತರಿಸಿ ಚಾಲನೆ ನೀಡಿ ಬ್ಯಾಟಿಂಗ್ ಮಾಡಿ ಉದ್ಘಾಟಿಸಿದಾಗ ನೆರೆದ ಕ್ರಿಕೆಟ್ ಪ್ರೇಮಿಗಳು ಹರ್ಷೋದ್ಗಾರ ಮಾಡಿದರು.

# ಫಲಕನಾಜ ಜಹಗೀರದಾರ ಅವರಿಗೆ ಡಯಟ್ ಇಲಕಲ್ ವತಿಯಿಂದ ಸನ್ಮಾನ



**ಇಲಕಲ್ :** ನಗರದ ಮುಸ್ತಾಕ ಅಲಿ ಜಹಗೀರದಾರ ಸರ್ ಅವರ ದ್ವಿತೀಯ ಸುಪುತ್ರಿ ಫಲಕನಾಜ ಜಹಗೀರದಾರ 2024–25 ನೇ ಸಾಲಿನ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವ್ಯಾಸಂಗ ಮಾಡಿ 625 ಕ್ಕೆ 537 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಕ್ಕಾಗಿ ಡಯಟ್ ಇಲಕಲ್ ವತಿಯಿಂದ ಸನ್ಮಾನ ಮಾಡಿ ವಿದ್ಯಾರ್ಥಿನಿ ಫಲಕನಾಜ ಜಹಗೀರದಾರ ಅವರಿಗೆ ಶುಭ ಹಾರೈಸಲಾಯಿತು.

**ವರದಿ: ಸೈಯದ್ ಸಿರಾಜ್ ಖಾಜಿ**

# ಜಾಲಿಹಾಳ ನೂತನ ಪ್ರೌಢಶಾಲೆಗೆ ಉತ್ತಮ ಫಲಿತಾಂಶ

**ಬಾದಾಮಿ :** ತಾಲೂಕಿನ ಜಾಲಿಹಾಳದ ನೂತನ ಪ್ರೌಢಶಾಲೆಗೆ 2024–25 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ–1 ರಲ್ಲಿ ಉತ್ತಮ ಫಲಿತಾಂಶ ಬಂದಿದೆ. ಶಾಲೆಗೆ ಕುಮಾರ್ ಶಂಕ್ರಪ್ಪ ಗೊಡ್ಡೆಮ್ಮಿ 574 ಅಂಕ ಪಡೆದು(91.84%) ಪ್ರಥಮ, ಕುಮಾರ ಸಾಯಿಕುಮಾರ ಅಳಗುಂಡಿ 569 ಅಂಕ ಪಡೆದು(91.4)% ದ್ವಿತೀಯ, ಕುಮಾರಿ ದ್ಯಾಮವ್ವ ಕಾಟಾಪುರ 552 ಅಂಕ ಪಡೆದು(ಶೇ88.32) ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಮುಖ್ಯಶಿಕ್ಷಕಿ ಜಯಶ್ರೀ ಗಣಾಚಾರಿ ತಿಳಿಸಿದ್ಧಾರೆ.

ಅಭಿನಂದನೆ; ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಚೇರಮನ್ ಅವಿನಾಶ ಸಾಲಿಮನಿ ಹಾಗೂ ಆಡಳಿತಾಧಿಕಾರಿ ಎಸ್. ಎಂ.ಕೊಟಿಗಿ, ಮುಖ್ಯಗುರುಮಾತೆ ಜಯಶ್ರೀ ಗಣಾಚಾರಿ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಎನ್‌ಎಸ್‌ಎಸ್ ಪಾತ್ರ ಬಹು ಮುಖ್ಯ: ಡಾ. ಸುಜಾತಾ

**ವಿಜಯಪುರ :** ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಎನ್ ಎಸ್ ಎಸ್ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಎನ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಸಿಕ್ಯಾಬ್ ಮಹಿಳಾ ಪಿಯು ಕಾಲೇಜಿನ ಪ್ರಾಂಶುಪಾಲರಾದ ಡಾ. ಸುಜಾತಾ ಕಟ್ಟಿಮನಿ ಅವರು ಹೇಳಿದರು.

ವಿಜಯಪುರದ ಸಿಕ್ಯಾಬ್ ಎ.ಆರ್. ಎಸ್. ಇನಾಮದಾರ್ ಮಹಿಳಾ ಪದವಿ ಕಾಲೇಜು ಮತ್ತು ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಗರದ ಕಸ್ತೂರಿ ಕಾಲನಿಯಲ್ಲಿ ಆಯೋಜಿಸಲಾದ ಎನ್ ಎಸ್ ಎಸ್ ವಿಶೇಷ ಶಿಬಿರದ ಉದ್ಘಾಟನಾ ನೆರವೇರಿಸಿ ಮಾತನಾಡಿದರು.

ಈ ಕೆಲಸವು ಬಹಳ ಮಹತ್ವದ್ದಾಗಿದೆ. ಇದು ವಿದ್ಯಾರ್ಥಿಗಳ ಮನಸ್ಸನ್ನು ವಿಕಸನಗೊಳಿಸುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸೇವೆಗಳ ಬಗ್ಗೆ ಅರಿವು ಮೂಡಿಸುವುದು ಈ ಕಾಲದ ಪ್ರಮುಖ ಅವಶ್ಯಕತೆಯಾಗಿದೆ. ಇದು ವಿದ್ಯಾರ್ಥಿಗಳು



ತಮ್ಮ ಪ್ರತಿಭೆಯನ್ನು ಬಳಸಿಕೊಳ್ಳಲು ಒಂದು ವೇದಿಕೆಯಾಗಿದೆ ಎಂದರು. ವಿಜಯಪುರದ ಸಿಕ್ಯಾಬ್ ಎ.ಆರ್.ಎಸ್. ಇನಾಮದಾರ್ ಪದವಿ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಕೆ. ಯಡಹಳ್ಳಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ನಾವು ಪರಸ್ಪರ ನಮ್ಮ ಸಾಮಾಜಿಕ ಜವಾಬ್ದಾರಿಗಳನ್ನು ಕಲಿಯಬೇಕು. ಉತ್ತಮ ನಡವಳಿಕೆಯನ್ನು ರೂಪಿಸಿಕೊಳ್ಳಬೇಕು ಮತ್ತು ಈ ಶಿಬಿರದ "ನನ್ನ ಭಾರತಕ್ಕಾಗಿ ಯುವಕರು" ಎಂಬ ಧ್ಯೇಯವಾಕ್ಯವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದು ಹೇಳಿದರು.

ಈ ಪ್ರದೇಶದಲ್ಲಿ ಶಿಕ್ಷಣ ಪ್ರಮಾಣ ಕಡಿಮೆಯಾಗಿದ್ದು, ನಾವು ಅದರ ಕುರಿತು ಶ್ರಮಿಸಬೇಕು ಮತ್ತು ಉತ್ತಮ ನಾಗರಿಕರೆಂದು ಸಾಬೀತುಪಡಿಸಬೇಕು. ಮೇ 3 ರಿಂದ ಮೇ 9 ರವರೆಗೆ ನಡೆಯುವ ಈ ಏಳು ದಿನಗಳ ವಿಶೇಷ ಶಿಬಿರದ ಸಂಪೂರ್ಣ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ, ಕಸ್ತೂರಿ ಕಾಲನಿಯ ಸದರ್ ತೂರ್ ಮಸೀದಿಯ ಮೌಲಾ ಸಾಹಿಬ್ ಗಲಗಲಿ, ಅಖ್ತರ್ ಹುಸೇನ್ ಮುಜಾವರ್ ಅತಿಥಿಗಳಾಗಿ ಭಾಗವಹಿಸಿದ್ದರು.

ಎನ್ ಎಸ್ ಎಸ್ ಅಧಿಕಾರಿ ಡಾ. ಮುಷ್ತಾಕ್ ಅಹ್ಮದ್ ಇನಾಮದಾರ್, ಎನ್ ಎಸ್ ಎಸ್ ಗುರಿಗಳು ಮತ್ತು ಉದ್ದೇಶಗಳನ್ನು ಮಂಡಿಸಿದರು. ಕುಮಾರಿ ಸವಿತಾ, ನವೇದಿತಾ, ವಿಜಯಲಕ್ಷ್ಮಿ, ರುಖ್ಸಾನಾ, ಮತ್ತು ಅಸ್ಮಾ ನಾಗರದಿನ್ನಿ ಅವರು ಎನ್ ಎಸ್ ಎಸ್ ಗೀತೆಯನ್ನು ಪ್ರಸ್ತುತಪಡಿಸಿದರು. ಪ್ರೊ?ರ. ವಿದ್ಯಾ ಬೆನ್ನೂರ್ ಸ್ವಾಗತ ಮತ್ತು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕುಮಾರಿ ನಾಜಿಯಾ, ಸುಜೇನ್ ಮತ್ತು ಅಫ್ರಾ ನಿರೂಪಣೆಯನ್ನು ನಿರ್ವಹಿಸಿದರು. ಎನ್ ಎಸ್ ಎಸ್ ಅಧಿಕಾರಿ ಡಾ. ಮುಹಮ್ಮದ್ ಸಮಿಯುದ್ದೀನ್ ವಂದಿಸಿದರು.

ಈ ಸಂದರ್ಭದಲ್ಲಿ ಉಪ ಪ್ರಾಂಶುಪಾಲರಾದ ಡಾ. ಹಾಜರಾ ಪರ್ವೀನ್, ಪ್ರಾಧ್ಯಾಪಕರಾದ ಮಹಮ್ಮದ್ ಹಸನ್ ಬಾಗಲಕೋಟ, ಡಾ. ಎಸ್. ಎಚ್. ಕಾಖಂಡಕಿ, ಪ್ರಾಧ್ಯಾಪಕರಾದ ಡಾ. ಎಲ್.ಐ.ನದಾಫ್, ಪ್ರಾಧ್ಯಾಪಕರಾದ ಅಂಬ್ರೀನ್ ಮುಲ್ಲಾ, ಮೀರಾ ಕಾಳೆ, ಸೋಮು ಅಂಕಲಗಿ, ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಚನ ದೀಪ್ತಿ ಅತ್ಯಂತ ಮೌಲಿಕ ಗ್ರಂಥ– ಹಾಸಿಂಪೀರ ವಾಲೀಕಾರ

**ವಿಜಯಪುರ :** ಬಸವಾದಿ ಶಿವಶರಣರು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಮೌಲಿಕ ಕೊಡುಗೆಗಳೆಂದರೆ ವಚನಗಳು. ವಚನಗಳ ಮೂಲಕ ನಮ್ಮ ಬದುಕು ಹಸನಾಗಿಸಿಕೊಳ್ಳಬಹುದು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ ವಾಲೀಕಾರ ಅಭಿಪ್ರಾಯಪಟ್ಟರು.

ಶುಕ್ರವಾರ ನಗರದ ಸ್ಟೇಶನ್ ರಸ್ತೆಯಲ್ಲಿರುವ ಷಣ್ಮುಖಾರೂಢ ಮಠದ ಸಭಾಂಗಣದಲ್ಲಿ ಜರುಗಿದ "ವಚನ ದೀಪ್ತಿ" ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಇದೊಂದು ಸಂಶೋಧನಾತ್ಮಕ ಕೃತಿಯಾಗಿದ್ದು, 22ಜನ ನಾಡಿನ ಖ್ಯಾತ ಲೇಖಕರು ಹಾಗೂ ಸಾಹಿತಿಗಳು, ವಿದ್ವಾಂಸರು ಈ ಗ್ರಂಥಕ್ಕೆ ತಮ್ಮ ಮೌಲ್ಯಯುತ ಲೇಖನ ನೀಡುವ ಮೂಲಕ ಗ್ರಂಥದ ಮೌಲ್ಯವನ್ನು ಹೆಚ್ಚಿಸಿದ್ದಾರೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅಭಿನವ ಸಿದ್ಧಾರೂಢ ಮಹಾಸ್ವಾಮಿಗಳು "ಅನುಭಾವಿಗಳ ಅನುಭವಗಳ ಪ್ರತಿಬಿಂಬಗಳೇ ವಚನಗಳು". ವಚನಗಳು ನಮ್ಮ ಬದುಕಿನ ಬಾಳಬುತ್ತಿಯಾಗಿವೆ. ಶರಣರ ಬದುಕು ನಮ್ಮ ಬದುಕಿಗೆ ಮಾದರಿ ಎನ್ನುತ್ತ ಬಿದ್ದವರನ್ನು ಎದ್ದು ನಿಲ್ಲಿಸುವಂತಹ ಮಾನವೀಯ ಮೌಲ್ಯಗಳನ್ನು ಒಳಗೊಂಡ ಸಾಹಿತ್ಯ ಈ ವಚನ ಸಾಹಿತ್ಯ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವೇದಿಕೆಯ ಅಧ್ಯಕ್ಷ ಹಾಗೂ ಹಿರಿಯ ನ್ಯಾಯವಾದಿ ವಿ.ಎಸ್ ಖಾಡೆ ಅವರು ವಚನಕಾರರ ವಚನಗಳ ಕಟ್ಟುಗಳನ್ನು ತಲೆಯ ಮೇಲೆ ಹೊತ್ತುಕೊಂಡು ಇಂದು ವಚನ ದಿಂಡಿ ನಡೆದದ್ದು ನನಗೆ ತುಂಬಾ ಸಂತೋಷ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ಕಾಯಕಯೋಗಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅಖಿಲ ಭಾರತ ವೀರಶೈವ ಮಹಾಸಭೆಯ ಜಿಲ್ಲಾಧ್ಯಕ್ಷ ವ್ಹಿ.ಸಿ. ನಾಗಠಾಣ ಅವರು, ನಗರದಲ್ಲಿ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯನ್ನು ಕಟ್ಟಿಕೊಂಡು ವಚನಕಾರರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಕಾರ್ಯ ತಮ್ಮ ವೇದಿಕೆಯ ಮೂಲಕ ಜರುಗುತ್ತಿದ್ದು ನನಗೆ ಅತೀವ ಸಂತೋಷವನ್ನು ಉಂಟು ಮಾಡಿದೆ.

ಈ ಕಾಯ9ದಲ್ಲಿ ಸಾಧ್ಯವಾದಷ್ಟು ಯುವಕ–ಯುವತಿಯರನ್ನು ತೊಡಗಿಸಿಕೊಳ್ಳಿ ಎಂಬ ಸಂದೇಶ ನೀಡುತ್ತ ಈ ವಷ9ದ ಕಾಯಕಯೋಗಿ ಪ್ರಶಸ್ತಿ ನನಗೆ ನೀಡಿದ್ದು ತುಂಬಾ ಸಂತೋಷ ಎನ್ನುತ್ತ ಈ ಪ್ರಶಸ್ತಿ ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು.

ಹೊನ್ನುಟಗಿ ಸರಕಾರಿ ಪ.ಪೂ ಕಾಲೇಜಿನ ಉಪನ್ಯಾಸಕ ಬಸವರಾಜ ಕುಂಬಾರ ಗ್ರಂಥ ಪರಿಚಯಿಸಿ ಮಾತನಾಡುತ್ತ 22 ಜನರ ಲೇಖನಗಳು ಒಂದಕ್ಕಿಂತ ಒಂದು ವಿಭಿನ್ನವಾಗಿ ಮೂಡಿ ಬಂದು ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ ಎಂದರು. ಲೇಖಕರ ಪರವಾಗಿ ಡಾ. ವಿ.ಎಂ ಬಾಗಾಯತ ಅನಿಸಿಕೆ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಡಾ. ಎಂ.ಎಸ್ ಮದಭಾವಿ, ಮಹಾಪೋಷಕರಾದ ಶಂಕರ ಬಸವಪ್ರಭು (ಸಕ್ರಿ) ವೇದಿಕೆಯ ಖಜಾಂಚಿ ರುಕ್ಮಾಂಗದ ಗುಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಡಾ. ಸುಜಾತಾ ಶಾಸ್ತ್ರಿ, ಡಾ.ಮಾಧವ ಎಚ್ ಗುಡಿ, ಡಾ ಸರಸ್ವತಿ ಚಿಮ್ಮಲಗಿ, ಸುಜಾತಾ ಪಟ್ಟಣಶೆಟ್ಟಿ, ಜಂಬುನಾಥ ಕಂಚ್ಯಾಣಿ, ವಿದ್ಯಾವತಿ ಅಂಕಲಗಿ, ಡಾ.ಸಂಗಮೇಶ ಮೇತ್ರಿ, ಮನು ಪತ್ತಾರ, ಡಾ. ಎಂ.ಎಸ್ ಚಾಂದಕವಟೆ, ಡಾ. ಆನಂದ ಕುಲಕರ್ಣಿ, ಡಾ. ಸುಜಾತಾ ಚಲವಾದಿ, ಭಾರತಿ ಪಾಟೀಲ, ಜಿ.ಆರ್ ಕುಲಕರ್ಣಿ, ಡಾ.ಗುರುಸಿದ್ಧಯ್ಯ ಸ್ವಾಮಿ, ಪಂಡಿತರಾವ ಪಾಟೀಲ, ಎಸ್. ಎಂ. ದಾಶ್ಯಾಳ, ಪ್ರೊ. ಮಲ್ಲಿಕಾರ್ಜುನ ಹುಲಗಬಾಳಿ, ಡಾ. ವ್ಹಿ.ಡಿ.ಐಹೊಳ್ಳಿ, ಪ್ರೊ. ಯು.ಎನ್. ಕುಂಟೋಜಿ, ಬಿ.ಆರ್ ಬನಸೋಡೆ ಮುಂತಾದವರು ತಮ್ಮ ಮೌಲಿಕ ಲೇಖನ ನೀಡುವ ಮೂಲಕ ಗ್ರಂಥದ ಮೌಲ್ಯ ಹೆಚ್ಚಿಸಿದ್ದು, ಉಪಸ್ಥಿತರಿದ್ದ ಲೇಖಕರನ್ನು ಸನ್ಮಾನಿಸಿ ಗ್ರಂಥ ನೀಡಿ ಗೌರವಿಸಲಾಯಿತು. ಬೆಳಿಗ್ಗೆ ಪವಾಡ ಬಸವೇಶ್ವರ ದೇವಸ್ಥಾನದಿಂದ ಷಣ್ಮುಖಾರೂಢ ಮಠದವರೆಗೆ ಶರಣರ ವಚನಗಳ ಗ್ರಂಥಗಳನ್ನು ತಲೆಯ ಮೇಲೆ ಹೊತ್ತುಕೊಂಡು ಮೆರವಣಿಗೆ ಮಾಡಲಾಯಿತು.

ಪ್ರಾಥ9ನೆಯನ್ನು ಕುಮಾರಿ ಸುಕೃತಿ ಹೊಸಮನಿ ನೆರವೇರಿಸಿದರು. ಎಸ್.ಡಿ ಕೃಷ್ಣಮೂತಿ9 ವಚನ ಗಾಯನ ಮಾಡಿದರು. ವೇದಿಕೆಯ ಉಪಾಧ್ಯಕ್ಷ ಎಸ್.ಎಂ.ಕಣಬೂರ ಸ್ವಾಗತಿಸಿ ಗೌರವಿಸಿದರು. ವೇದಿಕೆಯ ಗೌರವ ಕಾರ್ಯದರ್ಶಿ ಎನ್ ಆರ್ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಂಡಿತರಾವ ಪಾಟೀಲ ಹಾಗೂ ಸುಜಾತಾ ಪಟ್ಟಣಶೆಟ್ಟಿ ನಿರೂಪಿಸಿದರು. ಪೂಜಾ ಪಾಟೀಲ ವಂದಿಸಿದರು. ಸಾವಿತ್ರಿ ಬಸವಪ್ರಭು. ಬಿ ಎಮ್ ವಚನ ಗಾಯನ ಮಾಡಿದರು.

